ಆರ್.ಜಿ. ರಾಯಕರ
R.G. RAYAKAR

ಡಾ. ಪರಶುರಾಮ ಪಿ.
Dr. Parashuram P.

Karnataka Lalithakala Academy
Kannada Bhavan, J.C. Road, Bengaluru – 560 002

ಆರ್.ಜಿ. ರಾಯಕರ

R.G. Rayakar

ಆರ್.ಜಿ. ರಾಯಕರ

R.G. Rayakar

ಡಾ. ಪರಶುರಾಮ ಪಿ.

Dr. Parashuram P.

ಕರ್ನಾಟಕ ಲಲಿತಕಲಾ ಅಕಾಡೆಮಿ
2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002

Karnataka Lalitha Kala Academy
2nd, Floor, Kannada Bhavana, J.C. Road, Bangalore - 560 002
080 22480297 | www.lalithakalakarnatata.org | Kla.karnataka@gmail.com

R.G. **RAYAKAR** - A Monograph by **Dr. Parashuram P.**, Translated to English by **Dr. Srinivas Sirnoorkar**, Published by **Smt. Indramma H.V.**, Registrar, Karnataka Lalithakala Academy, Kannada Bhavan, J.C. Road, Bengaluru-560 002, Tel: 080-2248 0297

First Edition : 2018

@ Karnataka Lalithakala Academy

Pages : 52 + 8
Copies : 500
Paper Used : 80 GSM Maplitho
130 GSM Art
Book Size : 1/4 Crown

Price : Rs.90-00

ISBN: 978-81-938383-5-8

ಪ್ರಧಾನ ಸಂಪಾದಕರು : ಪ್ರೊ. ಎಂ.ಜೆ. ಕಮಲಾಕ್ಷಿ
ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ

ಪ್ರಕಾಶಕರು : ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ

ಸಂಪಾದಕ ಮಂಡಳಿ : ಶ್ರೀ ಎಚ್.ಎ. ಅನಿಲ್ ಕುಮಾರ್
ಡಾ. ಶಿವಾನಂದ ಎಚ್. ಬಂಟನೂರ
ಡಾ. ಸುಭಾಷ ಕಮ್ಮಾರ್
ಡಾ. ಪರಶುರಾಮ ಪಿ.
ಡಾ. ಸುರೇಂದ್ರನಾಥ್ ಡಿ.ಆರ್.

ಮುಖಪುಟ ಚಿತ್ರ : ಆರ್.ಜಿ. ರಾಯಕರರ ತೈಲವರ್ಣದ ಕಲಾಕೃತಿ

ಮುಖಪುಟ ವಿನ್ಯಾಸ : ಶ್ರೀ ಮಹೇಶ ಎಸ್. ಶ್ರೀಗಣಿ

ಮುದ್ರಕರು : ಚಾರುಮತಿ ಪ್ರಕಾಶನ
ಬೆಂಗಳೂರು – 560 018

ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿ ಅನೇಕ ಕಲಾ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದೆ. ಕಲಾ ಶಿಬಿರ, ಕಮ್ಮಟ, ವಿಮರ್ಶೆ, ಗೋಷ್ಠಿ, ಪ್ರದರ್ಶನ, ಹಿರಿಯ ಕಲಾವಿದರಿಗೆ ಗೌರವ ಪ್ರಶಸ್ತಿ ಇತ್ಯಾದಿ. ಪುಸ್ತಕಗಳ ಪ್ರಕಟಣೆ ಒಂದು ವಿಶಿಷ್ಟವಾದದ್ದು. ಈಗಾಗಲೇ ಹಲವಾರು ಪ್ರಕಟಣೆಗಳು ಅಕಾಡೆಮಿಯಿಂದ ಹೊರಬಂದಿರುವಲ್ಲಿ ಕಲಾವಿದರ ಬಗ್ಗೆಯ ಕಿರುಹೊತ್ತಿಗೆಗಳು.

ಕಲಾವಿದ ಆರ್.ಜಿ. ರಾಯಕರ ಅವರ ಸಾಧನೆಯ ಪರಿಚಯ ಈ ಕಿರುಹೊತ್ತಿಗೆಯಲ್ಲಿ ಬಹಳ ಸುಂದರವಾಗಿ ಕೊಡಲಾಗಿದೆ. ಅವರ ಬಾಲ್ಯದಿಂದ ಹಿಡಿದು ಸಾಧನೆ, ಸಂಘಟನೆ ಮತ್ತು ಕಲಾಭಿವೃದ್ಧಿಗೆ ಅವರು ಶ್ರಮಿಸಿದ ರೀತಿ ಹೀಗೆ ಅವರ ಬದುಕಿನ ಎಲ್ಲಾ ಆಯಾಮಗಳನ್ನೂ ಸಮಗ್ರವಾಗಿ ದಾಖಲಿಸಲಾಗಿದೆ. ತುಂಬು ಜೀವನ ನಡೆಸಿ, ಅವರ ಹೆಜ್ಜೆ ಗುರುತುಗಳನ್ನು ಉಳಿಸಿ ಹೋಗಿರುವುದನ್ನು ಕಾಣಬಹುದು. ಕಲಾವಿದ ಆರ್.ಜಿ. ರಾಯಕರ್ ಅವರ ವ್ಯಕ್ತಿತ್ವ ಒಂದು ಸೊಗಸು. ಕರಿ ಟೋಪಿ ತೊಟ್ಟು, ಬಿಳಿಪಂಚೆ ತೊಡುತ್ತಿದ್ದ ಇವರ ನಿಲುವು ಆಕರ್ಷಣೀಯವಾದುದು. ಮಾತಿನಲ್ಲಿ ದೃಢತೆ ಇದ್ದು, ಅದನ್ನು ಘಂಟಾಘೋಷವಾಗಿ ಹೇಳುತ್ತಿದ್ದರು. ಕಂಚಿನ ಧ್ವನಿಯ ಈ ಕಲಾಶಿಕ್ಷಕ ಎಲ್ಲರ ವಿಶ್ವಾಸವನ್ನು ಗಳಿಸಿದ್ದರು. ಗೌರವ, ಪ್ರಶಸ್ತಿ ಸನ್ಮಾನಗಳು ಇವರನ್ನು ಅರಸಿಕೊಂಡು ಬಂದಿದ್ದವು.

ಈ ಕಿರುಹೊತ್ತಿಗೆಯ ಬರಹಗಾರರಾದ ಡಾ. ಪರಶುರಾಮ ಪಿ. ಅವರು ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ವಿಚಾರ ಪೂರಕವಾಗಿ ಬರೆದಿದ್ದಾರೆ. ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪುಸ್ತಕದ ಪ್ರಕಾಶಕರಿಗೂ, ಸಂಪಾದಕ ಮಂಡಳಿಯ ಸದಸ್ಯರಿಗೂ ನನ್ನ ವಂದನೆಗಳು. ರಿಜಿಸ್ಟ್ರಾರ್ ಆದ ಇಂದ್ರಮ್ಮ ಹೆಚ್.ವಿ. ಹಾಗೂ ಅಕಾಡೆಮಿ ಸಿಬ್ಬಂದಿಯವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಎಂ.ಜೆ. ಕಮಲಾಕ್ಷಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಪ್ರಕಾಶಕರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಸಕ್ತ ಸಾಲಿನಲ್ಲಿ ಹಿರಿಯ ಕಲಾವಿದರ ಸಾಧನೆ, ಜೀವನ ಮತ್ತು ಅವರ ಕೃತಿಗಳ ಕುರಿತಂತೆ ಪುಸ್ತಕಗಳನ್ನು ಹೊರತರುವ ಯೋಜನೆಯ ಹಮ್ಮಿಕೊಂಡಿದೆ. ಇದರಲ್ಲಿ ಚಿತ್ರಕಲಾ ಅಧ್ಯಾಪಕರಾಗಿ ಮೂರು ದಶಗಳ ಸೇವೆ ಸಲ್ಲಿಸುವುದರೊಂದಿಗೆ ಚಿತ್ರಕಲಾವಿದಾರಗಿ, ಲೇಖಕರಾಗಿ, ಕಲಾ ಸಂಘಟಕರಾಗಿ, ಪ್ರಾಚೀನ ವಸ್ತುಗಳ ಸಂಗ್ರಾಹಕರಾಗಿ, ಸಾಂಸ್ಕೃತಿಕ ಚಿಂತಕರಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಗುರುತಿಸಿಕೊಂಡಿದ್ದ ದಿ. ಆರ್.ಜಿ. ರಾಯಕರರ ಜೀವನ ಸಾಧನೆಯ ಸ್ಥೂಲ ಪರಿಚಯದ ಅಂಶವನ್ನು ಕ್ರೋಢೀಕರಿಸಲಾಗಿದೆ.

ಕರ್ನಾಟಕ ದೃಶ್ಯಕಲಾ ಕ್ಷೇತ್ರದಲ್ಲಿ 'ರಾಯಕರ್ ಮಾಸ್ತರ್'ರೆಂದೇ ಚಿರಪರಿಚಿತವಾಗಿದ್ದ ಆರ್.ಜಿ. ರಾಯಕರ್ (ರಾಮಚಂದ್ರ ಗುರುರಾಯ ರಾಯಕರ್)ವರು 1924ನೆಯ ಅಗಸ್ಟ್ 30 ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜನಿಸಿದರು. ರಾಯಕರರ ಚಿತ್ರಕಲಾಕೃತಿಗಳು ವೈಶಿಷ್ಟ್ಯಪೂರ್ಣ ಅವರ ಎಲ್ಲಾ ಕೃತಿಗಳಲ್ಲೂ ಅವರ ವೈಶಿಷ್ಟ್ಯ ವ್ಯಕ್ತಿತ್ವದ ಮುದ್ರೆ. ತೈಲವರ್ಣದ ಸಂಯೋಜನ ಚಿತ್ರಗಳೇ ಆಗಿರಲಿ, ಭಾವಚಿತ್ರಗಳೇ ಆಗಿರಲಿ, ನಿಸರ್ಗ ಚಿತ್ರಗಳೇ ಆಗಿರಲಿ, ರೇಖಾಚಿತ್ರವೇ ಆಗಿರಲಿ ಅವುಗಳಲ್ಲಿ ಪ್ರಬುದ್ಧ ಕಲಾವಿದನ ಕೈಚಳಕದ ಸಿದ್ಧಿಯನ್ನು ಕಾಣಬಹುದು. ಇವರು ಅನೇಕ ಸ್ಮರಣ ಸಂಚಿಕೆಗಳ ಮತ್ತು ಪುಸ್ತಕಗಳ ಮುಖಪುಟ ಚಿತ್ರಗಳನ್ನು ರಚಿಸಿದ್ದಾರೆ. ಬಾದಾಮಿ, ಪಟ್ಟದಕಲ್ಲು, ಹಂಪೆ, ಕಾರವಾರ ಮತ್ತು ಯಾಣದ ಭೂದೃಶ್ಯ ಚಿತ್ರಗಳನ್ನು ಚಿತ್ರಿಸಿದ್ದಾರೆ. ಪೆನ್ಸಿಲ್ ಮತ್ತು ಸ್ಟಂಪ್ ಪೌಡರ್ ಮಾಧ್ಯಮದಲ್ಲಿ ಹೆಚ್ಚಿನ ಪರಿಣತಿಯನ್ನು ಸಾಧಿಸಿದ್ದರು. 1959ರಲ್ಲಿ ಕುಮಟಾದ ಗಿಬ್ಸ್ ಹೈಸ್ಕೂಲಿನ ಗೋಲ್ಡ್‌ನ ಜುಬ್ಲಿಯಲ್ಲಿ ಆರ್.ಜಿ. ರಾಯಕರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದ ಆಗಿನ ರಾಷ್ಟ್ರಾಧ್ಯಕ್ಷರಾದ ಮಾನ್ಯಶ್ರೀ ರಾಜೇಂದ್ರ ಪ್ರಸಾದ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರ ಅನೇಕ ಚಿತ್ರಕಲಾಕೃತಿಗಳಿಗೆ ಬಹುಮಾನ–ಪ್ರಶಸ್ತಿಗಳು ಸಂದಿವೆ. 1943–44ನೇ ಸಾಲಿನ ಬಾಂಬೆ ಆರ್ಟ್ ಸೊಸೈಟಿಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಬಹುಮಾನ ಪಡೆದ ಮೊದಲ ಕರ್ನಾಟಕದ ಚಿತ್ರಕಲಾವಿದರೆಂಬ ಹೆಗ್ಗಳಿಕೆ ಇವರದಾಗಿದೆ.

ಇಂತಹ ಮೇರು ಕಲಾವಿದರ ಪುಸ್ತಕದ ಲೇಖಕರಾದ ಡಾ. ಪರಶುರಾಮ ಪಿ. ಅವರು ಬಹಳ ಸುಂದರವಾಗಿ ಆರ್.ಜಿ. ರಾಯಕರ್ ಅವರ ಜೀವನಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ ಅವರಿಗೆ ಅಕಾಡೆಮಿಯ ಪರವಾಗಿ ಧನ್ಯವಾದಗಳು. ಅದೇ ರೀತಿ ಈ ಪುಸ್ತಕದ ಮುದ್ರಣಕ್ಕೆ ಸೂಕ್ತ ಸಲಹೆ ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಜೆ. ಕಮಲಾಕ್ಷಿ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಪ್ರಕಟಣಾ ಸಲಹಾ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಚಾರುಮತಿ ಪ್ರಕಾಶನ, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

– ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ

ಲೇಖಕರ ಮಾತು

ಕರಿಕೋಟು, ಕರಿಟೋಪಿ, ಬಿಳಿ ಅಂಗಿ, ಬಿಳಿ ಧೋತರ, ಹೆಗಲಿಗೊಂದು ಬ್ಯಾಗು ಹಾಕಿಕೊಂಡು ದೃಶ್ಯಕಲೆಯ ಬೆಳವಣಿಗೆಗಾಗಿ ಏಳು ದಶಕಗಳ ಕಾಲ ಕರ್ನಾಟಕದಾದ್ಯಂತ ನಡೆದಾಡಿದ 'ರಾಯಕರ ಮಾಸ್ತರ'ರ ಕಲಾ ಬದುಕಿನ ದಾಖಲೆ ಇಲ್ಲಿದೆ. 89 ವಸಂತಗಳನ್ನು ಬದುಕಿದ ಆರ್.ಜಿ. ರಾಯಕರರು ಚಿತ್ರಕಲಾ ಶಿಕ್ಷಕರಾಗಿ ಲೇಖಕರಾಗಿ, ಸಾಂಸ್ಕೃತಿಕ ಸಂಘಟಕರಾಗಿ, ಪ್ರಾಚೀನ ವಸ್ತುಗಳ ಸಂಗ್ರಾಹಕರಾಗಿ, ಸಾಂಸ್ಕೃತಿಕ ಚಿಂತಕರಾಗಿ, ಸಮಾಜ ಸೇವಕರಾಗಿ ಹೀಗೆ ಕಲೆ–ಸಂಸ್ಕೃತಿಯನ್ನೇ ಉಸಿರಾಡಿ ಹೆಸರಾದವರು. ಇಂಥ ಬಹುಮುಖ ಪ್ರತಿಭೆಯ ಕಲಾಸ್ಮರಣೆಗಳನ್ನು ನನಗೆ ದಕ್ಕಿದಷ್ಟು ಇಲ್ಲಿ ದಾಖಲಿಸಿರುವೆ.

ನಾನು ಕ್ಷೇತ್ರ ಕಾರ್ಯಕ್ಕೆ ಶಿರಸಿಗೆ ಹೋದಾಗ, ಈ ಪುಸ್ತಕಕ್ಕೆ ಬೇಕಾದ ಅನೇಕ ಮಾಹಿತಿ ಮತ್ತು ಛಾಯಾಚಿತ್ರಗಳನ್ನು ಒದಗಿಸಿ ಸಹಕರಿಸಿದ ಆರ್.ಜಿ. ರಾಯಕರ ಅವರ ಪುತ್ರ ಅನಂತ ರಾಯಕರ ಮತ್ತು ಕನ್ನಡದಿಂದ ಇಂಗ್ಲೀಷ್‌ಗೆ ಅನುವಾದಿಸಿದ ಹಿರಿಯ ಸಾಹಿತಿ ಮತ್ತು ಪತ್ರಕರ್ತ ಡಾ. ಶ್ರೀನಿವಾಸ ಸಿರನೂರಕರ್ ಹಾಗೂ ಈ ಪುಸ್ತಕದ ಕರಡು ತಿದ್ದುಪಡಿ ಮಾಡಿದ ಹಿರಿಯ ಚಿತ್ರಕಲಾವಿದ ಮತ್ತು ಕಲಾಬರಹಗಾರರಾದ ಶ್ರೀ ಬಸವರಾಜ ರೇ. ಉಪ್ಪಿನ ಅವರಿಗೆ ತುಂಬು ಹೃದಯದ ಧನ್ಯವಾದಗಳು. ನಾನು ಈ ಪುಸ್ತಕ ಬರೆದು ಕೊಡುವುದರಲ್ಲಿ ಸಾಕಷ್ಟು ತಡವಾದರೂ, ಅಪಾರ ಸಹನೆಯಿಂದ ಕಾದ ಮತ್ತು ಎಲ್ಲಾ ರೀತಿಯಲ್ಲಿಯೂ ಸಹಕಾರ ನೀಡಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾನ್ಯ ಅಧ್ಯಕ್ಷರಾದ ಪ್ರೊ. ಎಂ.ಜೆ. ಕಮಲಾಕ್ಷಿ, ರಿಜಿಸ್ಟ್ರಾರ್ ಇಂದ್ರಮ್ಮ ಹೆಚ್.ವಿ., ಸರ್ವ ಸದಸ್ಯರಿಗೂ, ಪ್ರಕಟಣಾ ಸಲಹಾ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿ ವರ್ಗಕ್ಕೂ ನಾನು ಅಭಾರಿಯಾಗಿದ್ದೇನೆ. ಉತ್ತಮವಾದ ಮುಖಪುಟ ಮತ್ತು ಒಳಪುಟಗಳನ್ನು ವಿನ್ಯಾಸಗೊಳಿಸಿದ ಶ್ರೀ ಮಹೇಶ ಎಸ್. ಶ್ರೀಗಣಿ ಅವರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಈ ಪುಸ್ತಕವನ್ನು ಹೊರತರಲು ಸಹಕರಿಸಿದ ಎಲ್ಲರಿಗೂ ಅನಂತ ವಂದನೆಗಳು.

ಡಾ. ಪರಶುರಾಮ ಪಿ

ಡಾ. ಪರಶುರಾಮ ಪಿ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಶಿರಕನಹಳ್ಳಿಯಲ್ಲಿ 1983ರಲ್ಲಿ ಜನನ. ದೃಶ್ಯಕಲೆಯಲ್ಲಿ ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ. ಪದವಿ ಪಡೆದಿರುವ ಡಾ. ಪರಶುರಾಮ ಪಿ. ಅವರು ದಾವಣಗೆರೆ, ಬೆಂಗಳೂರು, ಹೈದ್ರಾಬಾದ, ಗೋವಾ, ಮುಂಬಯಿ ಸೇರಿದಂತೆ ಏಳು ಏಕವ್ಯಕ್ತಿ ಕಲಾ ಪ್ರದರ್ಶನಗಳು, ದೇಶದ ವಿವಿಧ ಭಾಗಗಳಲ್ಲಿ ಹದಿನೈದು ಸಮೂಹ ಕಲಾಪ್ರದರ್ಶನಗಳು ಹಾಗೂ ಸುಮಾರು ಹದಿನೈದಕ್ಕೂ ಹೆಚ್ಚು ರಾಜ್ಯ ಮತ್ತು ರಾಷ್ಟ್ರಮಟ್ಟದ ಸಮಕಾಲೀನ ಕಲಾಶಿಬಿರಗಳಲ್ಲಿ ಭಾಗವಹಿಸುವಿಕೆ, 2005ರಲ್ಲಿ ಕುವೆಂಪು ವಿಶ್ವವಿದ್ಯಾಲಯದ ಯುವಜನೋತ್ಸವ ಪ್ರಶಸ್ತಿ, 2005 ಮತ್ತು 2008ರಲ್ಲಿ ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ನಡೆದ ಚಿತ್ರೋತ್ಸವದಲ್ಲಿ ಇನ್‌ಸ್ಟಾಲೇಷನ್ ಕಲಾಕೃತಿಗೆ ಪ್ರಥಮ ಪ್ರಶಸ್ತಿ, ಕಲಬುರಗಿ ಕಲಾ ಮಹೋತ್ಸವ ಪ್ರಶಸ್ತಿ, 2009ರಲ್ಲಿ ವಿಜಯಪುರದ ಎಸ್.ಎಸ್. ಫೈನ್ ಆರ್ಟ್ ಕಾಲೇಜ್ ಆಯೋಜಿಸಿದ ಎರಡನೆಯ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಮೆರಿಟ್ ಪ್ರಶಸ್ತಿ, 2009ರಲ್ಲಿ ಯು.ಜಿ.ಸಿ. ಯಿಂದ ರಾಜೀವಗಾಂಧಿ ನ್ಯಾಷನಲ್ ಫೆಲೊಶಿಪ್, 2016ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಸಂಶೋಧನಾ ಫೆಲೋಶಿಪ್. ಚಿತ್ರ-ಶಿಲ್ಪಕಲಾ ಕುರಿತು ಐವತ್ತಕ್ಕೂ ಹೆಚ್ಚು ವಿಮರ್ಶಾತ್ಮಕ ಮತ್ತು ಸಂಶೋಧನಾ ಲೇಖನಗಳು ನಾಡಿನ ವಿವಿಧ ಪತ್ರಿಕೆ ಮತ್ತು ವಾರಪತ್ರಿಕೆಗಳಲ್ಲಿ ಪ್ರಕಟ. ದೃಶ್ಯಕಲೆ ಕುರಿತು ನಾಲ್ಕು ಪುಸ್ತಕಗಳ ಪ್ರಕಟ. ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವಾರು ವಿಚಾರ ಸಂಕಿರಣಗಳಲ್ಲಿ ಪ್ರೌಢ ಪ್ರಬಂಧಗಳ ಮಂಡನೆ, 'ದೃಶ್ಯಬೆಳಕು' ಕನ್ನಡ ಮತ್ತು ಇಂಗ್ಲೀಷ್ ತ್ರೈಮಾಸಿಕ ಪತ್ರಿಕೆಯ ಸಂಪಾದಕ. 2011 ರಿಂದ ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕ.

Born in 1983 at Shirakanahalli in Indi taluk of Vijayapur district in Karnataka state, Dr. Parashuram has done his graduation, postgradutation and Ph.D. in Visual Art. As many as eight solo exhibitions of his art works have been held at Davanagere, Bengaluru, Hyderabad, Goa apart from group exhibitions in different parts of the country. He has participated in over 15 state and national level contemporary art camps. He has received a good number of awards and rewards. Included among them are: Youth Festival Award of Kuvempu University in 2005, first prize for his Installation art work at the Art Festival held at Fine Art College, Davanagere in 2007; Merit Award at the Second All India Art Exhibition organised by S.S. Fine Art College, Vijayapur in 2009; UGC Rajiv Gandhi National Fellowship in 2009; Research Fellowship by the Karnataka Shilpakala Academy in 2016. More than 50 critical and research articles published in different papers and magazines. He has written four books on Visual Art. He has presented papers at the state and national level seminars. He is the editor of 'Drushya Belaku', a bilingual Kannada and English quarterly. He has been serving as guest faculty at the Department of Visual Art of Gulbarga University since 2011.

ಆರ್.ಜಿ. ರಾಯಕರ

ಆರ್.ಜಿ. ರಾಯಕರ

ಉತ್ತರ ಕರ್ನಾಟಕದ ಪ್ರಸಿದ್ಧ ಚಿತ್ರಕಲಾವಿದರಾದ ಧಾರವಾಡದ ಡಿ.ವಿ. ಹಾಲಭಾವಿ ಮತ್ತು ಹುಬ್ಬಳ್ಳಿಯ ಡಾ. ಎಂ.ವಿ. ಮಿಣಜಗಿ ಅವರ ಮಾರ್ಗದರ್ಶನ ದಲ್ಲಿ ಕಲೆಯ ಸ್ವರೂಪ ದರ್ಶನ ಪಡೆದು, ನಂತರ ಮುಂಬಯಿಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಉನ್ನತ ಚಿತ್ರಕಲಾ ಶಿಕ್ಷಣ ಪಡೆದು, ಶಿರಸಿಗೆ ಹಿಂತಿರುಗಿ ಅಲ್ಲಿ ಚಿತ್ರಕಲಾ ಅಧ್ಯಾಪಕರಾಗಿ ಮೂರು ದಶಕಗಳ ಸೇವೆ ಸಲ್ಲಿಸುವುದರೊಂದಿಗೆ ಚಿತ್ರಕಲಾವಿದರಾಗಿ, ಲೇಖಕರಾಗಿ, ಕಲಾ ಸಂಘಟಕರಾಗಿ, ಪ್ರಾಚೀನ ವಸ್ತುಗಳ ಸಂಗ್ರಾಹಕರಾಗಿ, ಸಾಂಸ್ಕೃತಿಕ ಚಿಂತಕರಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಗುರುತಿಸಿಕೊಂಡಿದ ದಿ. ಆರ್.ಜಿ. ರಾಯಕರರ ಜೀವನ ಸಾಧನೆಯ ಸ್ಥೂಲ ಪರಿಚಯವನ್ನು ಇಲ್ಲಿ ದಾಖಲಿಸಲಾಗಿದೆ.

ಬಾಲ್ಯ – ಸಾಂಸ್ಕೃತಿಕ ಪರಿಸರ

ಕರ್ನಾಟಕ ದೃಶ್ಯಕಲಾ ಕ್ಷೇತ್ರದಲ್ಲಿ 'ರಾಯಕರ ಮಾಸ್ತರ' ರೆಂದೇ ಚಿರಪರಿಚಿತ ವಾಗಿದ್ದ ಆರ್.ಜಿ. ರಾಯಕರ (ರಾಮಚಂದ್ರ ಗುರುರಾಯ ರಾಯಕರ)ವರು 1924ನೆಯ ಅಗಷ್ಟ್ 30 ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜನಸಿದರು. ತಂದೆ ಗುರುರಾಯ ರಾಮಚಂದ್ರ ರಾಯಕರ ಶಿರಸಿಯ ಹಾಗೂ ರಾಜ್ಯದ ಶ್ರೇಷ್ಠ ಸುವರ್ಣ ಹಾಗೂ ಬೆಳ್ಳಿಯ ಕುಶಲಕರ್ಮಿಯಾಗಿದ್ದರು. ಶಿರಸಿಯ ಶ್ರೀ ಮಾರಿಕಾಂಬಾ ದೇವಿಗಾಗಿ ವಜ್ರ ವೈಢೂರ್ಯಗಳಿಂದ ರಚಿಸಿದ ಸುವರ್ಣ ಕಿರೀಟವು ಅವಿಸ್ಮರಣೀಯ ಕೊಡುಗೆಯಾಗಿದೆ. ಆರ್.ಜಿ. ರಾಯಕರರ ತಾಯಿಯ ಹೆಸರು ನಾಗಮ್ಮ. ರಾಯಕರ ಅವರ ತಂದೆಯವರು ಉತ್ತರ ಕನ್ನಡ ಜಿಲ್ಲೆಯಲ್ಲೇ ಪ್ರಥಮ 'ಸ್ತ್ರೀ ನಾಟಕ ಮಂಡಳಿ' ಸ್ಥಾಪಿಸಿ ಪ್ರಮುಖ ಪಾತ್ರವಹಿಸಿದ ಹೆಗ್ಗಳಿಕೆ. ಇವರು ಗಾಜಿನ ಮೇಲೆ ಚಿತ್ರಗಳನ್ನು ರಚಿಸುತ್ತಿದ್ದರು. ಹೀಗೆ ಸಾಂಸ್ಕೃತಿಕ

ಪರಿಸರ ಹೊಂದಿರುವ ಮನೆತನ, ಇವರ ಬಾಲ್ಯ ಜೀವನದಲ್ಲಿ ಕಲಾಸಕ್ತಿ ಮೂಡಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

ಆರ್.ಜಿ. ರಾಯಕರ ಅವರ ತಂದೆಯವರು ಪ್ರತಿ ವರ್ಷ ನಡೆಯುವ ಶ್ರೀ ಮಾರಿಕಾಂಬಾ ಜಾತ್ರೆಯ ಸಂದರ್ಭದಲ್ಲಿ ಮಾರಿಕಾಂಬೆಯ ವಿಗ್ರಹಕ್ಕೆ ಬಣ್ಣ ಹಚ್ಚುವುದು ಮತ್ತು ಪ್ರಭಾವಳಿ ಪೀಠಕ್ಕೆ ರಾಮಾಯಣ, ಮಹಾಭಾರತಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ರಚಿಸುತ್ತಿದ್ದರು. ಆಗ ಬಾಲಕ ಆರ್.ಜಿ. ರಾಯಕರರವರು ಕೂಡಾ ತಂದೆಯ ಜೊತೆಯಲ್ಲಿ ಸಣ್ಣ–ಪುಟ್ಟ ಕೆಲಸಗಳನ್ನು, ಬಣ್ಣ ಹಚ್ಚುವುದು ಮಾಡುತ್ತಿದ್ದರಿಂದ ಚಿತ್ರಕಲೆಯಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಮೂಡಿತು.

ಆರ್.ಜಿ. ರಾಯಕರರವರ ಚಿತ್ರಕಲಾ ಶಿಕ್ಷಣ

ಶಿರಸಿಯ ಪ್ರಾಥಮಿಕ ಶಾಲೆ ಮತ್ತು ಶ್ರೀ ಮಾರಿಕಾಂಬಾ ಪ್ರೌಢ ಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮುಗಿಸಿದ ಆರ್.ಜಿ. ರಾಯಕರ ಮಿಣಜಗಿಯವರ ಕಲಾ ಶಾಲೆಯಲ್ಲಿ ತಮ್ಮ ಚಿತ್ರಕಲಾ ಶಿಕ್ಷಣದ ಮೊದಲ ಹೆಜ್ಜೆಯನ್ನು ಇಟ್ಟರು. ನಂತರ ದಿ॥ ಡಿ.ವಿ. ಹಾಲಭಾವಿ ಕಲಾ ಶಾಲೆಯಲ್ಲಿ ಸಹ ಒಂದು ವರ್ಷ ಚಿತ್ರಕಲಾಭ್ಯಾಸ ಮಾಡಿದ್ದಾರೆ. ನಂತರ ಮುಂಬೈಯ ಸರ್. ಜೆ.ಜೆ. ಕಲಾ ಶಾಲೆಯಲ್ಲಿ ಡಿ.ಟಿ.ಸಿ., ಆರ್ಟ್ ಮಾಸ್ಟರ್ ಕೋರ್ಸ, ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೊಮಾ ಕೋರ್ಸ ಮುಗಿಸುತ್ತಾರೆ. ಅಲ್ಲಿನ ಡಿ.ಟಿ.ಸಿ. ತರಗತಿಯ ಮುಖ್ಯಸ್ಥರಾದ ಪಿ.ಎ. ಧೋಂಡ್ ಅವರ ಪ್ರಭಾವ ಇವರ ಮೇಲೆ ಆಯಿತು. ಅವರು ರಾಯಕರರ ಮೇಲೆ ಅತೀವ ಪ್ರೀತಿ ಮತ್ತು ಆತ್ಮೀಯತೆಯನ್ನು ಹೊಂದಿದ್ದರು. ಅವರು ನಿಸರ್ಗಚಿತ್ರ ರಚನೆಗೆ ಹೋಗುವಾಗ ರಾಯಕರರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಹೀಗೆ ಮುಂಬಯಿಯಲ್ಲಿ ಚಿತ್ರಕಲಾ ಅಧ್ಯಯನ ಮಾಡುವ ಸಂದರ್ಭದಲ್ಲಿ ಅನೇಕ ಖ್ಯಾತ ಚಿತ್ರಕಲಾವಿದರ ಸಂಪರ್ಕವಾಗಿ ಅವರ ಚಿತ್ರಕಲಾಕೃತಿಗಳನ್ನು ವೀಕ್ಷಿಸಿ, ಹೆಚ್ಚಿನ ಸ್ಫೂರ್ತಿ ಪಡೆದು ಪ್ರಭಾವಿತರಾದರು. ಅವರೆಲ್ಲರ ಮಾರ್ಗದರ್ಶನದೊಂದಿಗೆ ಕಲೆಯ ವೈವಿಧ್ಯತೆ, ತಂತ್ರ–ಶೈಲಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆದುಕೊಂಡರು. ಮುಂಬಯಿ ನಗರದ ಯಾವುದೇ ಚಿತ್ರಕಲಾ ಗ್ಯಾಲರಿಯಲ್ಲಿ ಕಲಾ ಪ್ರದರ್ಶನಗಳು ಆಯೋಜನೆಗೊಂಡಾಗ ತಪ್ಪದೆ ಹೋಗಿ ಕಲಾಕೃತಿಗಳನ್ನು ವೀಕ್ಷಿಸುತ್ತಿದ್ದರು. ದೇಶದ ಅನೇಕ ಖ್ಯಾತ ಕಲಾವಿದರ ಕಲಾಕೃತಿಗಳನ್ನು ಆಳವಾಗಿ ಪರಿಶೀಲಿಸುವ ಸಲುವಾಗಿ ಹೆಚ್ಚಿನ ಸಮಯವನ್ನು ಕಲಾಗ್ಯಾಲರಿಯಲ್ಲಿಯೇ ಕಳೆಯುತ್ತಿದ್ದರು. ಸರ್ ಜೆ.ಜೆ. ಕಲಾ ಶಾಲೆಯ ಮುಖ್ಯಸ್ಥರಾದ ವಿ.ಎಸ್. ಆಡೂರಕರ್ ಅವರ ಮನೆಗೆ ಹಲವು ಭಾರಿ ಭೇಟಿ ನೀಡಿದ ಇವರು ಅವರ ಪೆನ್ಸಿಲ್‌ನಿಂದ ರಚಿಸಿದ ಕಲಾಕೃತಿಗಳಿಗೆ ಮಾರು ಹೋಗಿದ್ದರು. ಹೀಗೆ ಮುಂಬಯಿಯ ಕಲಾ ವಾತಾವರಣದಲ್ಲಿ ಇವರ ಚಿತ್ರಕಲಾ ಶಿಕ್ಷಣ ನಡೆಯಿತು.

ಮುಂಬೈನ ಸರ್ ಜೆ.ಜೆ. ಕಲಾ ಶಾಲೆ

ಲಂಡನ್ನಿನ 'ರಾಯಲ್ ಅಕಾಡೆಮಿ ಆಫ್ ಆರ್ಟ್ಸ್' ಮಾದರಿಯಲ್ಲಿ ಬ್ರಿಟೀಷರು ಸ್ಥಾಪನೆ ಮಾಡಿದ ಕಲಾಶಾಲೆಯಿದು. ಮುಂಬೈನಲ್ಲಿ ನೆಲೆಸಿದ್ದ 'ಸರ್ ಜೀಜಾಭಾಯಿ ಜೇಮಶೇಡಜಿ' ಎನ್ನುವ ಪಾರ್ಸಿ ಜನಾಂಗದ ಶ್ರೀಮಂತ ವ್ಯಕ್ತಿ ಹಡಗುಗಳಿಗಾಗಿ ನೆಲಹಾಸು ಸಿದ್ಧಗೊಳಿಸುವ ಕಾಯಕದಲ್ಲಿ ನಿರತರಾಗಿದ್ದವರು. ವ್ಯಾಪಾರ ವಹಿವಾಟಿಗೆಂದು ವಿದೇಶಗಳಿಗೂ ಹೋಗಿ ಬಂದು ಮಾಡುತ್ತಿದ್ದರಿಂದ ಸಹಜವಾಗಿಯೇ ಅಲ್ಲಿನ ಕಲಾ ವಾತಾವರಣವನ್ನು ತಿಳಿದುಕೊಂಡರು. ಕ್ರಿ.ಶ. 1851 ರಲ್ಲಿ ಲಂಡನ್‌ನಲ್ಲಿನ ಅಂತಾರಾಷ್ಟ್ರೀಯ

ಕಲಾ ಪ್ರದರ್ಶನವೊಂದರ ವೀಕ್ಷಣೆಗೆಂದು ಹೋಗಿದ್ದರು. ಈ ಒಂದು ಕಲಾ ಪ್ರದರ್ಶನ ಜೇಮಶೇಡಜಿ ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು. ಭಾರತದಲ್ಲೂ ಇಂಥ ಕಲಾ ವಾತಾವರಣ ಸೃಷ್ಟಿಸಬೇಕೆಂಬ ನಿಶ್ಚಯ ಮನಸ್ಸಿನಲ್ಲಿ ಮಾಡಿಕೊಂಡೇ ಬಂದಿದ್ದರು. ಈ ಎಲ್ಲ ಕಾರಣಗಳ ಹಿನ್ನೆಲೆಯಾಗಿ ಕ್ರಿ.ಶ. 1857ರ ಮಾರ್ಚ 2 ರಂದು 'ಜೆ.ಜೆ. ಕಲಾಶಾಲೆ' ಅಸ್ತಿತ್ವಕ್ಕೆ ಬಂದಿತು. ಆರಂಭದಲ್ಲಿ ಯುರೋಪಿಯನ್ ಕಲಾವಿದರೆ ಇಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡಿರುವ ಕಾರಣ ಬ್ರಿಟೀಷ್ ಶೈಕ್ಷಣಿಕ ಪಠ್ಯವನ್ನೇ ಇಲ್ಲಿ ಬೋಧಿಸಲಾಗುತ್ತಿತ್ತು. ಕಲಾವಿದರಾಗಬೇಕೆನ್ನುವವರಿಗೆ ಚಿತ್ರಕಲಾ ಶಿಕ್ಷಣ ಪಡೆಯಲು ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಆಕರ್ಷಣ ಕೇಂದ್ರವಾಗಿತ್ತು. ವಿಕ್ಟೋರಿಯನ್ ಯುಗದ ದೃಷ್ಟಿಕೋನವನ್ನು ಅಮದು ಮಾಡಿಕೊಂಡಂತಹ ಈ ಕಲಾಸಂಸ್ಥೆಯ ಖ್ಯಾತಿ ದೇಶಾದ್ಯಂತ ವ್ಯಾಪಿಸಿತ್ತು. ದೃಶ್ಯಕಲಾ ಶಿಕ್ಷಣಕ್ಕೆ ತನ್ನದೇಯಾದ ಪರಂಪರೆ, ತಂತ್ರಗಾರಿಕೆಗಳಿಂದ ಗುರುತಿಸಿಕೊಂಡ ಕಲಾಕೇಂದ್ರವಾಗಿದ್ದು ಭಾರತದ ವಿವಿಧ ಪ್ರದೇಶದ ವಿದ್ಯಾರ್ಥಿಗಳು ಚಿತ್ರಕಲಾ ಶಿಕ್ಷಣ ಪಡೆಯಲು ಇಲ್ಲಿಗೆ ಬರುತ್ತಿದ್ದರು. ಇಂತಹ ಒಂದು ಉನ್ನತ ಕಲಾಸಂಸ್ಥೆಯೊಂದರಲ್ಲಿ ಆರ್.ಜಿ. ರಾಯಕರ ಅವರು ಚಿತ್ರಕಲಾ ಶಿಕ್ಷಣ ಪಡೆಯುತ್ತಾರೆ.

ಸರ್ ಜೆ.ಜೆ. ಕಲಾ ಶಾಲೆಯ ಪಠ್ಯಕ್ರಮ

ಸರ್ ಜೆ.ಜೆ. ಕಲಾ ಶಾಲೆಯಲ್ಲಿ ಮೊದಲಿಗೆ ರೇಖಾಚಿತ್ರ ಹಾಗೂ ವರ್ಣಚಿತ್ರಗಳ (Department of Drawing and Painting) ವಿಭಾಗವನ್ನು ಪ್ರಾರಂಭಿಸಲಾಗುತ್ತದೆ. (ಹೆಚ್ಚಿನ ವಿವರಗಳಿಗಾಗಿ N.N. Kelkar ಅವರು ಬರೆದ Sir. J.J. School of Art Bombay, A Hundred years of its career ಪುಸ್ತಕವನ್ನು ನೋಡಿ). ಈ ವಿಭಾಗದಲ್ಲಿ ಚಿತ್ರಕಲೆಯ ಡಿಪ್ಲೊಮಾ ಕೋರ್ಸ್ ಕಲಿಸಲಾಗುತ್ತಿತ್ತು. ಈ ಕೋರ್ಸ್ ಮಾಡಲಿಚ್ಚಿಸುವವರು ಲೋವರ್, ಹೈಯರ್ ಗ್ರೇಡ್ ಪರೀಕ್ಷೆಗಳನ್ನು ಪಾಸು ಮಾಡಬೇಕಿತ್ತು. ಈ ಗ್ರೇಡ್ ಪರೀಕ್ಷೆಗಳನ್ನು ಪಾಸು ಮಾಡಿದ ಮೇಲೆಯೇ ಎಲೆಮೆಂಟರಿ ಪೇಂಟಿಂಗ್ ಪರೀಕ್ಷೆಗೆ (ಇದನ್ನು ಡಿಪ್ಲೊಮಾ ಮೊದಲ ವರ್ಷ ಎಂದು ಪರಿಗಣಿಸಲಾಗುತ್ತಿತ್ತು) ಕುಳಿತು ಕೊಳ್ಳುವ ಅವಕಾಶವಿತ್ತು. ಎರಡನೇ ವರ್ಷಕ್ಕೆ ಇಂಟರ್ ಮೀಡಿಯೆಟ್ ಪೇಂಟಿಂಗ್, ಮೂರನೇ ವರ್ಷಕ್ಕೆ ಅಡ್ವಾನ್ಸ್ ಪೇಂಟಿಂಗ್ (ಇದನ್ನು ಪ್ರಿ ಫೈನಲ್ ಎಂತಲೂ ಕರೆಯಲಾಗುತ್ತದೆ) ಮತ್ತು ನಾಲ್ಕನೇ ವರ್ಷಕ್ಕೆ ಡಿಪ್ಲೊಮಾ ಫೈನಲ್ ಎಂಬಂತೆ ಒಟ್ಟು ನಾಲ್ಕು ವರ್ಷದ ಕೋರ್ಸ್ ಇದಾಗಿತ್ತು.

ಮೊದಲ ವರ್ಷದ ಎಲೆಮೆಂಟರಿಯಾಗಿ Still life, Portrait, Drawing from cost, Human anatomy, Design ವಿಷಯಗಳನ್ನು ಕಲಿಸಲಾಗುತ್ತಿದ್ದರೆ, ಎರಡನೇ ವರ್ಷದ ಇಂಟರ್‌ಮೀಡಿಯೆಟ್‌ಗೆ Portrait, Angular Perspective, Life Study, Anatomy, Composition ವಿಷಯವನ್ನು ಹೇಳಿ ಕೊಡಲಾಗುತ್ತಿತ್ತು. ಮೂರನೇ ವರ್ಷದ ಅಡ್ವಾನ್ಸ್ ಪೇಂಟಿಂಗ್‌ನಲ್ಲಿ Time Sketches, Life Study, Composition ವಿಷಯವನ್ನು ಹೇಳಿಕೊಡಲಾಗುತ್ತಿತ್ತು. ನಾಲ್ಕನೇ ವರ್ಷಕ್ಕೆ Composition ಮಾತ್ರ ಕಲಿಸಲಾಗುತ್ತಿತ್ತು.

ಪ್ರತಿಯೊಂದು ವಿಷಯವೂ ಸಹ ವಿಶಿಷ್ಟ ಕಲಿಕೆಯಿಂದ ಕೂಡಿರುತ್ತಿತ್ತು. ಒಂದು ಚಿತ್ರವನ್ನು ರಚಿಸುವ ಮುನ್ನ ಪೂರ್ವಸಿದ್ಧತೆ ಚಿತ್ರವನ್ನು (Key Sketch) ರಚಿಸಬೇಕಿತ್ತು. ಕೊನೆಯಲ್ಲಿ ಗುರುಗಳು ಸರಿ ಎಂದು ಹೇಳಿದ ಚಿತ್ರವನ್ನು ಮಾತ್ರ ಪೂರ್ಣಗೊಳಿಸಬೇಕಾಗುತ್ತಿತ್ತು. ಬಣ್ಣಗಳು ಹಾಗೂ ದೂರ-ಸಮೀಪ (ದೃಗ್ದರ್ಶನ)ವನ್ನು ಅರ್ಥೈಸಿಕೊಳ್ಳಲು ಭೂದೃಶ್ಯದ ಚಿತ್ರವನ್ನು ಚಿತ್ರಿಸಬೇಕಾಗಿತ್ತು. ಇದು

ಕಲಾವಿದನ ಬೆಳವಣಿಗೆಗೆ ಅವಶ್ಯವೂ ಆಗಿತ್ತು. 'ಅಂಗರಚನಾಶಾಸ್ತ್ರ (Anatomy) ವಿಷಯದ ಪಾಠಕ್ಕೆಂದು ಜೆ.ಜೆ. ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸತ್ತ ಮನುಷ್ಯನ ದೇಹದ ವಿವಿಧ ಭಾಗಗಳನ್ನು ಕತ್ತರಿಸಿ ಒಳಗಿನ ಎಲುಬು ಮತ್ತು ಸ್ನಾಯುಗಳ ಸೂಕ್ಷ್ಮತೆಯನ್ನು ಹೇಳಿಕೊಡಲಾಗುತ್ತಿತ್ತು.'[1] ಇದರಿಂದಾಗಿ ಮಾನವದೇಹದ ಮೂಳೆ–ಸ್ನಾಯುಗಳ ಚಿತ್ರರಚನೆಗೆ ಅನುಕೂಲವಾಗುತ್ತಿತ್ತು. ಇಂಥ ಒಂದು ವ್ಯವಸ್ಥೆ ಜೆ.ಜೆ. ಕಲಾಶಾಲೆಯಲ್ಲಿತ್ತು.

ಶಿಕ್ಷಕ ವೃತ್ತಿ

ಆರ್.ಜಿ. ರಾಯಕರರ ಹೆಸರು ನೆನಪಾದೊಡನೆ ಶಿಸ್ತು, ಸರಳತೆ, ನಿಷ್ಠೆ, ಪ್ರಾಮಾಣಿಕತೆ, ನಿಪುಣತೆ, ಸೇವಾಕಾರ್ಯ, ಸಮಯಪ್ರಜ್ಞೆ, ಆಧ್ಯಾತ್ಮಿಕ ಒಲವು ಇತ್ಯಾದಿ ಗುಣಗಳನ್ನು ಮೈಗೂಡಿಸಿಕೊಂಡು, ಎತ್ತರ ನಿಲುವಿನ ಮೈಕಟ್ಟು, ಗೋಧಿ ವರ್ಣದ ಮೈಬಣ್ಣ, ಕರಿ ಟೋಪಿ, ಧೋತರ ಉಟ್ಟ ಶುಭ್ರ ವಸ್ತ್ರಧಾರಿ ವ್ಯಕ್ತಿತ್ವವೊಂದು ನಮ್ಮ ಕಣ್ಣ ಮುಂದೆ ಬಂದು ನಿಲ್ಲುವುದು. ಎಲ್ಲರನ್ನೂ ಪ್ರೀತಿಯಿಂದ ಅಪ್ಪಿಕೊಂಡು ಆರಾಧಿಸುವ ಸದ್ಗುಣ ಸಂಪನ್ನ, ಬಹುಮುಖ ವ್ಯಕ್ತಿತ್ವದ ಪ್ರತಿಭಾನ್ವಿತ ವ್ಯಕ್ತಿಯಾಗಿದ್ದರು.

ರಾಯಕರ ಅವರು ಶಿರಸಿಯ ಶ್ರೀ ಮಾರಿಕಾಂಬಾ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ತಮ್ಮ ವೃತ್ತಿಜೀವನ ಪ್ರಾರಂಭಿಸುತ್ತಾರೆ. 1947 ರಿಂದ 1980 ರವರೆಗೆ 33 ವರ್ಷಗಳ ದೀರ್ಘಕಾಲ ಸೇವೆಯನ್ನು ಸಲ್ಲಿಸಿ, ಅದೇ ಪ್ರೌಢ ಶಾಲೆಯಲ್ಲಿ ವಯೋನಿವೃತ್ತಿ ಹೊಂದಿದ ಶ್ರೇಯಸ್ಸು ಇವರದು. ಚಿತ್ರಕಲೆ ವಿಷಯದ ಪರಿಜ್ಞಾನವನ್ನು ಅಚ್ಚುಕಟ್ಟಾದ ರೀತಿಯಲ್ಲಿ ಬಿಂಬಿಸಿ, ಅದೊಂದು ಮಹತ್ವದ ವಿಷಯವೆಂದು ಖಚಿತಪಡಿಸಿದರು. ಕಲೆ ಇಲ್ಲದೆ ಯಾವ ಬದುಕು ಬೆಳೆಯುವದಕ್ಕೆ ಸಾಧ್ಯವೇ ಇಲ್ಲವೆಂದು ವಿದ್ಯಾರ್ಥಿಗಳ ಮನದಲ್ಲಿ ಬಿಂಬಿಸಿ, ಅನವರತವಾಗಿ ದುಡಿದರು. ಇವರು ಚಿತ್ರಕಲೆ ವಿಷಯದ ಭೋದನೆಗೆ ಮಾತ್ರ ಸೀಮಿತವಾಗಿರಲಿಲ್ಲ. ನೈತಿಕ ಶಿಕ್ಷಣ, ನಾಟಕ, ಹಾಡು, ಅಭಿನಯ, ಸಾಹಿತ್ಯ, ಭಾಷಣ, ಶೈಕ್ಷಣಿಕ ಪ್ರವಾಸ ನಾನಾ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಬೆಳೆಸಿ, ಸರ್ವತೋಮುಖವಾಗಿ ಬೆಳೆಸಲು ಜೀವನ ಪೂರ್ತಿ ಶ್ರಮಿಸಿದರು. ಆಗಲೇ ನಾಯಕತ್ವದ ಗುಣ ಬೆಳೆಸಿಕೊಂಡಿದ್ದರು. ಉತ್ತಮ ವಾಗ್ಮಿಯಾಗಿ ಮಕ್ಕಳ ಸ್ಫೂರ್ತಿಯ ಸೆಲೆಯಾಗಿದ್ದರು. 'ರಾಯಕರ್ ಮಾಸ್ತರರು' ಆಕರ್ಷಕ ಮತ್ತು ಆದರ್ಶ ವ್ಯಕ್ತಿತ್ವದಿಂದ ವಿದ್ಯಾರ್ಥಿಗಳ ಹಾಗೂ ಪಾಲಕರ ಸಮೂಹದಲ್ಲಿ ಚಿತ್ರಕಲಾ ಶಿಕ್ಷಕರ ಸ್ಥಾನಮಾನಕ್ಕೆ ಘನತೆಯನ್ನು ತಂದುಕೊಟ್ಟರು.

ಅವರ ಶಿಷ್ಯರಾದ ಡಾ. ಗಿರೀಶ ಕಾರ್ನಾಡ (ಜ್ಞಾನಪೀಠ ಪ್ರಶಸ್ತಿ ವಿಜೇತರು) ಡಾ. ಆರ್.ಕೆ. ಹೆಗಡೆ (ವೈಸ್ ಚಾನ್ಸಲರ್), ಶ್ರೀ ಕೆ.ವಿ. ಕಡೇಕೊಡಿ (ಅಮೆರಿಕದಲ್ಲಿ ಪ್ರಾಧ್ಯಾಪಕ), ಶ್ರೀ ಜಿ.ಕೆ. ಕಡೇಕೊಡಿ (ಅಮೇರಿಕದಲ್ಲಿ ಬ್ಯಾಂಕ್ ವ್ಯವಸ್ಥಾಪಕ), ಶ್ರೀ ನೀರ್ನಳ್ಳಿ ರಾಮಕೃಷ್ಣ (ಶ್ರೇಷ್ಠ ಸಿನೇಮಾ ನಟ), ಡಾ. ಬಿ.ಎಸ್. ಸೋಂದೆ (ವೈಸ್ ಚಾನ್ಸಲರ್), ಶ್ರೀ ಬಿ.ಡಿ. ಬಾಳಿಗಾ (ಚೀಫ್ ಇಂಜಿನಿಯರ್), ಡಾ. ಜಿ.ಆರ್. ರೇವಣಕರ್ (ಅಮೇರಿಕದಲ್ಲಿ ಸಂಶೋಧಕರು), ಡಾ. ಗೋಪಾಲ ರೇವಣಕರ್ (ಹವಾಯಿಯಲ್ಲಿ ಕಾಲೇಜು ಪ್ರಿನ್ಸಿಪಾಲರು), ಶ್ರೀ ಎಮ್.ಆರ್. ಹೆಗಡೆ (ರಾಜ್ಯ ಚುನಾವಣಾ ಆಯುಕ್ತರು), ಶ್ರೀ ಸುರೇಶ ಇಡಗುಂಜಿ (ನಾಶಿಕನಲ್ಲಿ ಹಣ ಮುದ್ರಣ ಮಾಡುವ ಫ್ಯಾಕ್ಟರಿಯ ಚೀಫ್ ಡೈರೆಕ್ಟರ್‌ರು), ಶ್ರೀ ಶಾಂತಾರಾಮ ಹೆಗಡೆ (ರಾಜಕೀಯ ಮುತ್ಸದ್ದಿ), ಶ್ರೀ ಪಿ.ಎಸ್. ಜೈವಂತ (ಮಾಜಿ ಮಂತ್ರಿಗಳು), ಶ್ರೀ ವಿವೇಕಾನಂದ

ಅಡಿ ಟಿಪ್ಪಣಿ: 1. ನಾಡೋಜ ಡಾ. ಜೆ.ಎಸ್. ಖಂಡೇರಾವ್, ಲೇ: ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ, 2013

ವೈದ್ಯ (ಎಂ.ಎಲ್.ಎ.), ಶ್ರೀ ಎಸ್.ಎ. ಕಾಸರಗೋಡ (ರೋಟರಿ ಗವರ್ನರ್) ಇದೇ ರೀತಿ ಅನೇಕರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಗಳಿಸಿದ್ದಾರೆ. ಇವರೆಲ್ಲರೂ ರಾಯಕರ್ ಮಾಸ್ತರರನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ. ಶಿರಸಿಗೆ ಬಂದಾಗ ರಾಯಕರ ಮಾಸ್ತರರನ್ನು ಭೇಟಿಯಾಗಿ ಹೋಗುತ್ತಿದ್ದರು.

ಅವರ ಅನೇಕ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದ ಚಿತ್ರ-ಶಿಲ್ಪಕಲಾವಿದರಾಗಿ ಪ್ರಖ್ಯಾತರಾಗಿರುವರು ಶ್ರೀಯುತರಾದ ವೈ.ಜೆ. ಆಚಾರ್ಯ, ಸುಧಾಕರ ವಿ. ರಾಯಕರ, ಸುರೇಶ ಜೆ. ಕುಮಟಾಕರ್, ಆರ್. ಎಸ್. ದೇಸಾಯಿ, ನೀರ್ನಳ್ಳಿ ಗಣಪತಿ ಹೆಗಡೆ, ಜಿ.ಎಂ. ಹೆಗಡೆ, ರವಿ ಕೋಡ್ಕಣಿ, ಎಂ.ಜೆ. ನಾಯಕ, ಡಾ. ಎಚ್.ಆರ್. ರಘುನಾಥ ಭಟ್ಟ, ಸದಾನಂದ ಶಾನಭಾಗ, ಆರ್.ವಿ. ಹೆಗಡೆ, ಕಿಶೋರ ನೇತ್ರಕರ್ ಮುಂತಾದವರೆಲ್ಲ ಶಿಷ್ಯರಾಗಿ ಅಭಿಮಾನ ಪಡುವಂತಹದ್ದು.

ರಾಯಕರರವರ ಚಿತ್ರಕಲಾಕೃತಿಗಳು

ರಾಯಕರರ ಚಿತ್ರಕಲಾಕೃತಿಗಳು ವೈಶಿಷ್ಟ್ಯಪೂರ್ಣ ಅವರ ಎಲ್ಲಾ ಕೃತಿಗಳಲ್ಲೂ ಅವರ ವೈಶಿಷ್ಟ್ಯ ವ್ಯಕ್ತಿತ್ವದ ಮುದ್ರೆ. ತೈಲವರ್ಣದ ಸಂಯೋಜನ ಚಿತ್ರಗಳೇ ಆಗಿರಲಿ, ಭಾವಚಿತ್ರಗಳೇ ಆಗಿರಲಿ, ನಿಸರ್ಗ ಚಿತ್ರಗಳೇ ಆಗಿರಲಿ, ರೇಖಾಚಿತ್ರವೇ ಆಗಿರಲಿ ಅವುಗಳಲ್ಲಿ ಪ್ರಬುದ್ಧ ಕಲಾವಿದನ ಕೈಚಳಕದ ಸಿದ್ಧಿಯನ್ನು ಕಾಣಬಹುದು. ಇವರು ಅನೇಕ ಸ್ಮರಣ ಸಂಚಿಕೆಗಳ ಮತ್ತು ಪುಸ್ತಕಗಳ ಮುಖಪುಟ ಚಿತ್ರಗಳನ್ನು ರಚಿಸಿದ್ದಾರೆ. ಬದಾಮಿ, ಪಟ್ಟದಕಲ್ಲು, ಹಂಪೆ, ಕಾರವಾರ ಮತ್ತು ಯಾಣದ ಭೂದೃಶ್ಯ ಚಿತ್ರಗಳನ್ನು ಚಿತ್ರಿಸಿದ್ದಾರೆ. ಪೆನ್ಸಿಲ್ ಮತ್ತು ಸ್ಟಂಪಿಂಗ್ ಪೌಡರ್ ಮಾಧ್ಯಮದಲ್ಲಿ ಹೆಚ್ಚಿನ ಪರಿಣತಿಯನ್ನು ಸಾಧಿಸಿದ್ದರು. 1959ರಲ್ಲಿ ಕುಮಟಾದ ಗಿಬ್ಸ್ ಹೈಸ್ಕೂಲಿನ ಗೋಲ್ಡನ್ ಜುಬಿಲಿಯಲ್ಲಿ ಆರ್.ಜಿ. ರಾಯಕರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದ ಆಗಿನ ರಾಷ್ಟ್ರಾಧ್ಯಕ್ಷರಾದ ಮಾನ್ಯ ರಾಜೇಂದ್ರ ಪ್ರಸಾದ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರ ಅನೇಕ ಚಿತ್ರಕಲಾಕೃತಿಗಳಿಗೆ ಬಹುಮಾನ-ಪ್ರಶಸ್ತಿಗಳು ಸಂದಿವೆ. 1943-44ನೇ ಸಾಲಿನ ಬಾಂಬೆ ಆರ್ಟ್ ಸೊಸೈಟಿಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಬಹುಮಾನ ಪಡೆದ ಮೊದಲ ಕರ್ನಾಟಕದ ಚಿತ್ರಕಲಾವಿದರೆಂಬ ಹೆಗ್ಗಳಿಕೆ ಇವರದಾಗಿದೆ.

ರಾಯಕರರವರ ಚಿತ್ರಕಲಾಕೃತಿಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು. 1. ಭಾವಚಿತ್ರಗಳು (Portraits) 2. ಸಂಯೋಜನ ಚಿತ್ರಗಳು (Compositions) 3. ನಿಸರ್ಗ ಚಿತ್ರಗಳು (Landscapes) 4. ರೇಖಾಚಿತ್ರಗಳು (Drawings). 5. ವಿನ್ಯಾಸಗಳು (Designs).

ಭಾವಚಿತ್ರಗಳು (Portraits)

ದೃಶ್ಯಕಲೆಯಲ್ಲಿ ಹತ್ತು ಹಲವು ರೀತಿಯ ಪ್ರಕಾರಗಳಿದ್ದು, ಭಾವಚಿತ್ರವು ಒಂದು ಪ್ರಧಾನವಾದ ಕಲಾ ಪ್ರಕಾರವಾಗಿದೆ. ಭಾವಚಿತ್ರ ಇಂದು ಅಕಾಡೆಮಿಕ ಸಂದರ್ಭದಲ್ಲಿ ಪಠ್ಯಕ್ರಮದ ಮುಖ್ಯ ವಿಷಯವಾಗಿ ಪ್ರಚಲಿತದಲ್ಲಿದೆ. ಅಕಾಡೆಮಿಕ ಸೂರಿನಡಿಯಲ್ಲಿ ಬೆಳೆದಿರುವುದರಿಂದ ಭಾವಚಿತ್ರ ರಚನೆಯಲ್ಲಿ ಕರ್ನಾಟಕದ ಹಲವಾರು ಚಿತ್ರಕಲಾವಿದರು ಸಾಕಷ್ಟು ಪರಿಣತಿಯನ್ನು ಸಾಧಿಸಿದ್ದಾರೆ. ಮುಂಬಯಿ, ಕಲ್ಕತ್ತಾ, ಚೈನೈ ಮತ್ತು ಲಾಹೋರ್ ಕಲಾಶಾಲೆಗಳಲ್ಲಿ ಪ್ರಾರಂಭದಿಂದಲೂ ಭಾವಚಿತ್ರ ರಚನೆಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿದ್ದರು. (ಈಗಲೂ ಕೂಡಾ ಈ ದೃಶ್ಯಕಲಾ ಕಾಲೇಜುಗಳಲ್ಲಿ ಭಾವಚಿತ್ರ ರಚನೆಗೆ ಪ್ರಥಮ ಆದ್ಯತೆ ಇದೆ) ಮುಂಬಯಿಯ ಪ್ರತಿಷ್ಠಿತ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಹಲವಾರು ಚಿತ್ರಕಲಾವಿದರು ಭಾವಚಿತ್ರ ರಚನೆಯಲ್ಲಿ ಪಕ್ವತೆ ಸಾಧಿಸಿದ್ದಾರೆ. ಅವರಲ್ಲಿ ಡಿ.ಜಿ. ಬಡಿಗೇರ್, ಎಂ.ವಿ. ಮಿಣಜಗಿ,

ಜಿ.ಎಸ್. ದಂಡಾವತಿಮಠ, ಕೆ.ಕೆ. ಹೆಬ್ಬಾರ್, ಎಸ್.ಎನ್. ಸ್ವಾಮಿ, ಡಾ. ಎಸ್.ಎಂ. ಪಂಡಿತ, ಡಿ.ವಿ. ಹಾಲಭಾವಿ, ಕೇಶವಯ್ಯ, ಶಾಂತಲಿಂಗಪ್ಪ ಪಾಟೀಲ್, ವಿ.ಕೆ. ಪಾಟೀಲ್, ಪಾವಂಜೆ, ಶಂಕರರಾವ್ ಆಳಂದಕರ್, ಎಂ.ಟಿ. ಭೂಪಲೆ, ಕುಮಾರ ಚಂದ್ರಶೇಖರ, ಬಸವರಾಜ ಹಳಿಜೋಳ, ಎಂ.ಎ. ಚೆಟ್ಟಿ, ಆರ್.ಎಂ. ಹಡಪದ, ವಿಜಯ ಸಿಂಧೂರ್, ಎಂ.ಬಿ. ಪಾಟೀಲ್, ನಾಡೋಜ ಡಾ. ಜೆ.ಎಸ್. ಖಂಡೇರಾವ್, ನಾಡೋಜ ಡಾ. ವಿ.ಟಿ. ಕಾಳೆ, ಪೀಟರ್ ಲೂಯಿಸ್, ಕೆ.ಬಿ. ಕುಲಕರ್ಣಿ, ಗೋಪಾಲ್ ಪದ್ಮಶಾಲಿ, ಶ್ರೀಕಾಂತ ಶೆಟ್ಟಿ, ಕೆ.ಎಸ್. ರಾವ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಹುಬ್ಬಳ್ಳಿಯ ಡಾ. ಎಂ.ಜಿ. ಮಿಣಜಿಗಿ ಕಲಾಶಾಲೆ ಮತ್ತು 1945 ರಿಂದ 1947 ರ ವರೆಗೆ ಮುಂಬಯಿಯ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲಾಧ್ಯಯನ ಮಾಡಿದ ಆರ್.ಜಿ. ರಾಯಕರ ಅವರು ಕೂಡಾ ಹಲವಾರು ಭಾವಚಿತ್ರಗಳನ್ನು ರಚಿಸಿದ್ದಾರೆ. ರಾಯಕರ ಅವರು ಪೆನ್ಸಿಲ್, ಸ್ಟಂಪಿಂಗ್ ಪೌಡರ್ ಮತ್ತು ತೈಲವರ್ಣ ಮಾಧ್ಯಮದಲ್ಲಿ ಭಾವಚಿತ್ರಗಳನ್ನು ರಚಿಸಿದ್ದಾರೆ.

ತೈಲವರ್ಣದ ಭಾವಚಿತ್ರಗಳು (Oil Colour Portraits)

ಆರ್.ಜಿ. ರಾಯಕರ ಅವರು ತೈಲವರ್ಣದಲ್ಲಿ ರಚಿಸಿದ ಅನೇಕ ಭಾವಚಿತ್ರಗಳಲ್ಲಿ ರುಮಾಲನ್ನು ಧರಿಸಿರುವ ಮುಸ್ಲಿಂ ಸಮುದಾಯದ ವ್ಯಕ್ತಿಯ ಭಾವಚಿತ್ರದಲ್ಲಿ ಅವರ ಕಲಾ ನೈಪುಣ್ಯತೆಯನ್ನು ಕಾಣಬಹುದಾಗಿದೆ. ನೆರಳು-ಬೆಳಕಿನ ಮೇಳದೊಂದಿಗೆ ವ್ಯಕ್ತಿಯ ಚರ್ಮದ ಮೈವಳಿಕೆಯನ್ನು ಅವಲೋಕಿಸಿದರೆ, ಒಂದು ಅತ್ಯುತ್ತಮ ಭಾವಚಿತ್ರ ಕಾಣಬಹುದು, ಶ್ವೇತ ವರ್ಣದ ರುಮಾಲು ಹಾಗೂ ನಿಲುವಂಗಿಯ ನಡುವೆ ಕಂದುಗಪ್ಪಿನ ಮುಖ. ಮುಖದ ಬಲಭಾಗಕ್ಕಿಂತ ಎಡಭಾಗದಲ್ಲಿ ಗಾಢ ವರ್ಣಗಳ ಲೇಪನ. ಬಿಳಿಗಡ್ಡ ಹಾಗೂ ತುಟಿಯ ಭಾಗದಲ್ಲಿ ಮೂಡಿಬಂದ ಬ್ರಷ್‌ನ ಸ್ಟ್ರೋಕ್‌ಗಳು ರಾಯಕರ ಅವರು ಒಬ್ಬ ಅಪರೂಪದ ಭಾವಚಿತ್ರಕಲಾವಿದರೆಂದು ಗುರುತಿಸುವಂತೆ ಮಾಡಿವೆಯೆಂದು ಹೇಳಬಹುದು.

ಭಾವಚಿತ್ರ / Portrait

ರಾಯಕರ ಅವರು ತಮ್ಮದೇ ಭಾವಚಿತ್ರ ಚಿತ್ರಿಸಿಕೊಂಡಿದ್ದಾರೆ. ಬಣ್ಣಗಳ ಬಳಕೆ, ನೆರಳು-ಬೆಳಕು ಎಲ್ಲವೂ ವಿಶಿಷ್ಟವಾಗಿದೆ. ಈ ಭಾವಚಿತ್ರದಲ್ಲಿ ಹೆಚ್ಚಾಗಿ ಸೌಮ್ಯ ವರ್ಣಗಳನ್ನು ಬಳಸಿದ್ದು, ಹಳದಿ, ಬಿಳಿ ಮತ್ತು ಕಂದು ಬಣ್ಣಗಳ ಮಿಶ್ರಣದಿಂದ ಮುಖದಲ್ಲಿ ನೆರಳು-ಬೆಳಕನ್ನು ತೋರಿಸಿದ್ದಾರೆ. ಭಾವಚಿತ್ರದ ಹಿನ್ನೆಲೆಯಲ್ಲಿ ಬಿಳಿ ಮಿಶ್ರಿತ ನೇರಳೆ ಬಣ್ಣವನ್ನು ಪ್ಯಾಚ್‌ಗಳಾಗಿ ಬಳಸಿಕೊಂಡಿದ್ದಾರೆ. ಕೋಟ್ ಮತ್ತು ಕರಿಟೋಪಿ ಧರಿಸಿರುವ ರಾಯಕರರವರ ಈ ಭಾವಚಿತ್ರದಲ್ಲಿ ದೇಹದ ಹೊರ ರೂಪದ ವಾಸ್ತವದೊಂದಿಗೆ ವ್ಯಕ್ತಿತ್ವ ಮತ್ತು ಭಾವನೆಗಳಿಗೂ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಅತ್ಯಂತ ತೀವ್ರಗತಿಯಲ್ಲಿ ರಚನೆಗೊಂಡ ಭಾವಚಿತ್ರ ಇದಾಗಿದೆ. ಏಕೆಂದರೆ ಭಾವಚಿತ್ರದಲ್ಲಿ ಅತ್ಯಂತ ರಭಸವಾಗಿ ಕುಂಚದ ಬೀಸುಗಳನ್ನು ಗಮನಿಸಬಹುದಾಗಿದೆ. 2000ರ ಮೇ 29 ರಿಂದ

ಜೂನ್ 4 ರ ವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು 'ಕರ್ನಾಟಕದ ದೃಷ್ಟಿಕೋನ: ಓನ್ಲೋಟ-2' ಎಂಬ ಶೀರ್ಷಿಕೆಯಲ್ಲಿ ಏರ್ಪಡಿಸಿದ ಹಿರಿಯ ಕಲಾವಿದರ ಕಲಾಕೃತಿಗಳ ಪ್ರದರ್ಶನದಲ್ಲಿ ಈ ಭಾವಚಿತ್ರವು ಪ್ರದರ್ಶನಗೊಂಡಿದೆ.

ರಾಯಕರರ ಅವರು ತಮ್ಮ ಜೀವನದಲ್ಲಿ ಕಂಡ ಅತ್ಯಂತ ದೊಡ್ಡ ವ್ಯಕ್ತಿಯೆಂದರೆ ಅವರ ಪ್ರೀತಿಯ ಪತ್ನಿ ಕಮಲಾ. ಸರಳ ಸ್ವಭಾವದ ಗೃಹಿಣಿಯಾದ ಕಮಲಾ ಅವರನ್ನು ರಾಯಕರರು ಅತ್ಯಂತ ಪ್ರೀತಿ-ಗೌರವಗಳಿಂದ ಕಾಣುತ್ತಿದ್ದರು. 2002ರಲ್ಲಿ ತಮ್ಮ ಪತ್ನಿ ಕಮಲಾಳನ್ನು ಕಳೆದುಕೊಂಡ ರಾಯಕರರು ತಮ್ಮ ಪ್ರೀತಿಯ ಪತ್ನಿಯ ಸುಂದರವಾದ ಭಾವಚಿತ್ರವೊಂದನ್ನು ತೈಲವರ್ಣದಲ್ಲಿ ರಚಿಸಿದ್ದಾರೆ. ಮಲೆನಾಡಿನ ಜೀವನ ಶೈಲಿಯ ಸಾಂಪ್ರದಾಯಿಕ ಉಡುಗೆ-ತೊಡುಗೆ ಮತ್ತು ಆಭರಣಗಳನ್ನು ಧರಿಸಿರುವ ಕಮಲಾ ಅವರ ಭಾವಚಿತ್ರವು ಅತ್ಯಂತ ಕಲಾತ್ಮಕವಾಗಿ ಮೂಡಿಬಂದಿದೆ. ಇವರ ಇತರ ಭಾವಚಿತ್ರಗಳಿಗಿಂತಲೂ ಭಿನ್ನವಾದ ಭಾವಚಿತ್ರ ಇದಾಗಿದೆ. ಇವರು ರಚಿಸಿದ ಅನೇಕ ಭಾವಚಿತ್ರಗಳಲ್ಲಿ ತೀವ್ರವಾದ ಕುಂಚದ ಬೀಸುಗಳು ಮತ್ತು ಒರಟುತನ ಗಮನಿಸಬಹುದು. ಆದರೆ ಇವರ ಪತ್ನಿಯ ಭಾವಚಿತ್ರದಲ್ಲಿ ಸೌಮ್ಯವರ್ಣಗಳ ಹದವಾದ ಮಿಶ್ರಣದೊಂದಿಗೆ, ಆಕರ್ಷಕವಾಗಿ ಬಳಸಿ ಜೀವಂತಿಕೆಯನ್ನು ಹಿಡಿದಿಟ್ಟಿದ್ದಾರೆ. ತಮ್ಮ ಪತ್ನಿಯ ವ್ಯಕ್ತಿತ್ವವನ್ನು ಪ್ರಭಾವಿಸುವ ಹಲವು ವಿಶಿಷ್ಟ ಲಕ್ಷಣಗಳು ಅಥವಾ ಸಾದೃಶ್ಯವನ್ನು ಹಿಡಿದಿಡಿಯಲು ಪ್ರಯತ್ನಿಸಿದ್ದಾರೆ. ಈ ಭಾವಚಿತ್ರದಲ್ಲಿ ತದ್ರೂಪತೆಯ ಜೊತೆಗೆ ಅಂತರಾಳದ ಭಾವನೆಗಳನ್ನು ವಿಶಿಷ್ಟ ರೀತಿಯಲ್ಲಿ ಕಣ್ಣು, ತುಟಿಯ ಮುಖಾಂತರ ಅಭಿವ್ಯಕ್ತಿಗೊಳಿಸಿ, ಪರಿಪೂರ್ಣತೆ ಪಡೆಯುದರಲ್ಲಿ ಯಶಸ್ವಿಯಾಗಿದ್ದಾರೆ.

ಶಿರಸಿಯ ಚನ್ನಪಟ್ಟಣದ ಬಝಾರ್‌ನಲ್ಲಿರುವ ರಾಯಕರರು ವಾಸವಾಗಿದ್ದ 'ಕಮಲಾ ನಿವಾಸ'ದಲ್ಲಿ ರಾಯಕರ ಅವರಿಗೆ ಸಂದ ಪ್ರಶಸ್ತಿ-ಸನ್ಮಾನ ಪತ್ರಗಳು, ಸ್ಮರಣಿಕೆಗಳು ಮತ್ತು ಅವರು ಕುಟುಂಬ ವರ್ಗದವರೊಂದಿಗೆ, ಗಣ್ಯ ವ್ಯಕ್ತಿಗಳೊಂದಿಗೆ ತೆಗೆಸಿಕೊಂಡ ಕಪ್ಪು-ಬಿಳುಪಿನ ಅನೇಕ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಇವುಗಳಲ್ಲಿ ರಾಯಕರರು ತೈಲವರ್ಣದಲ್ಲಿ ರಚಿಸಿದ ಯುವಕನ ಭಾವಚಿತ್ರವೊಂದು ಇದ್ದು, ಅತ್ಯಂತ ಆಕರ್ಷಕವಾಗಿ ಮೂಡಿಬಂದಿದೆ. ರಭಸವಾದ ಕುಂಚದ ಬೀಸುಗಳಿಂದ, ಅತ್ಯಂತ ತೀವ್ರಗತಿಯಲ್ಲಿ ರಚನೆಗೊಂಡಿರುವುದನ್ನು ಕಾಣಬಹುದು. ನೆರಳು-ಬೆಳಕಿನ ಆಟದ ನಡುವೆ ನೈಜತೆಯನ್ನು ಉಳಿಸಿಕೊಂಡಿದೆ. ಮುಖವನ್ನು ಕೆಂಪು ಮತ್ತು ಕಂದು ವರ್ಣದಲ್ಲಿ ರಚಿಸಿ, ಬಿಳಿ ಬಣ್ಣದಿಂದ ಹೈಲೈಟ್ಸ್‌ಗಳನ್ನು ಹಾಕಲಾಗಿದೆ. ಬಿಳಿ ಬಣ್ಣದಲ್ಲಿ ಮೂಡಿದ ಕಣ್ಣಿನ ಕಾಂತಿಯ ಪ್ರಕಾಶನ ಭಾವಚಿತ್ರಕ್ಕೆ ಚೈತನ್ಯ ತುಂಬಿದೆ. ವ್ಯಕ್ತಿಯ ಅಂಗಿಯನ್ನು ನೀಲಿ ಮತ್ತು ಬಿಳಿ ಬಣ್ಣಗಳ ಮಿಶ್ರಣದಿಂದ ರಚಿಸಿ, ಭಾವಚಿತ್ರದ ಹಿನ್ನೆಲೆಯನ್ನು ಕಂದು ಮತ್ತು ಕಪ್ಪು ಬಣ್ಣಗಳಿಂದ ಪೂರ್ಣಗೊಳಿಸಲಾಗಿದೆ.

ಸ್ಟಂಪಿಂಗ್ ಪೌಡರ್ (ಹುಡಿ ಬಣ್ಣ)ನಿಂದ ರಚಿಸಿದ ಭಾವಚಿತ್ರಗಳು

ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲಾ ಅಧ್ಯಯನ ಮಾಡಿದ ಉತ್ತರ ಕರ್ನಾಟಕದ ಹಲವಾರು ಚಿತ್ರಕಲಾವಿದರು ತೈಲವರ್ಣದ ಭಾವಚಿತ್ರ ರಚಿಸುವುದರೊಂದಿಗೆ ಸ್ಟಂಪಿಂಗ್ ಪೌಡರ್ (ಹುಡಿ ಬಣ್ಣ) ಮಾಧ್ಯಮದಲ್ಲಿಯ ಅನೇಕ ಭಾವಚಿತ್ರಗಳನ್ನು ರಚಿಸಿದ್ದಾರೆ. ಆರ್.ಜಿ. ರಾಯಕರ ಅವರು ಕೂಡಾ ಅತ್ಯುತ್ತಮವಾದ ಹಲವಾರು ಭಾವಚಿತ್ರಗಳನ್ನು ಸ್ಟಂಪಿಂಗ್ ಪೌಡರ್‌ನಿಂದ ರಚಿಸಿದ್ದಾರೆ. ಸ್ಟಂಪಿಂಗ್ ಪೌಡರ್‌ನಿಂದ ಭಾವಚಿತ್ರ ರಚಿಸಲು ಸಾಕಷ್ಟು ತಾಳ್ಮೆ ಮತ್ತು ಹಸ್ತ ಕೌಶಲ್ಯ ಬೇಕಾಗುತ್ತದೆ. ಮೊದಲಿಗೆ ಪೆನ್ಸಿಲ್‌ನಿಂದ ಪ್ರಮಾಣಬದ್ಧವಾಗಿ ಸ್ಕೆಚ್ ಮಾಡಿಕೊಳ್ಳಬೇಕು. ನಂತರ ಸ್ಟಂಪಿಂಗ್ ಪೌಡರ್

ಬಣ್ಣವನ್ನು ಮೃದುವಾದ ಬಟರ್ ಪೇಪರ್, ಬಟ್ಟೆ ಅಥವಾ ಕೈಬೆರಳಿನಿಂದ ಸ್ಟಂಪಿಂಗ್ ಪೌಡರ್‌ನ್ನು ಮಿಶ್ರಣ ಮಾಡಿ ಹಚ್ಚಿ, ಏಕವರ್ಣದಲ್ಲಿ ನೆರಳು-ಬೆಳಕನ್ನು ಸಮರ್ಪಕವಾಗಿ ತೋರಿಸಬೇಕು. ಈ ಮಾಧ್ಯಮದಲ್ಲಿ ರಚಿಸಿದ ಚಿತ್ರಕಲಾಕೃತಿಗಳನ್ನು ಹಾಳಾಗದಂತೆ ತಡೆಯಲು, ಕಲಾಕೃತಿ ಮೇಲೆ ಪಿಕ್ಚರ್ ವಾರ್ನಿಷ ಸ್ಪ್ರೇ ಮಾಡಬೇಕು.

ಆರ್.ಜಿ. ರಾಯಕರ ಅವರು ಸ್ಟಂಪಿಂಗ್ ಪೌಡರ್ ನಿಂದ ಕಪ್ಪು-ಬಿಳುಪಿನಲ್ಲಿ ರಚಿಸಿದ ಭಾವಚಿತ್ರಗಳು ಅತ್ಯಂತ ಜನಪ್ರಿಯವಾಗಿದ್ದವು. ಏಕೆಂದರೆ ಆ ಭಾವಚಿತ್ರಗಳು ತುಂಬಾ ನೈಜತೆಯಿಂದ ಕೂಡಿದ್ದವು. ಛಾಯಾಚಿತ್ರ ಗಳಿಗಿಂತ ಇವೇನು ಕಡಿಮೆ ಇಲ್ಲವೆಂಬಂತೆ ಆಕರ್ಷಕವಾಗಿ ಮೂಡಿಬಂದಿವೆ. ರಾಯಕರ ಅವರು ಈ ಮಾಧ್ಯಮದಲ್ಲಿ ರಚಿಸಿದ ಐದು ಮೂಲ ಚಿತ್ರಗಳ ಛಾಯಾಚಿತ್ರಗಳು ಅವರ ಪುತ್ರ ಅನಂತ ರಾಯಕರ ಅವರ ಸಂಗ್ರಹದಲ್ಲಿವೆ. ಈ ಐದು ಭಾವಚಿತ್ರಗಳು ಪ್ರಮಾಣಬದ್ಧತೆಯೊಂದಿಗೆ, ನೆರಳು-ಬೆಳಕುಗಳ ವ್ಯತ್ಯಾಸದೊಂದಿಗೆ ವ್ಯಕ್ತಿಯ ಭಾವ ವನ್ನು ಮೂಡಿಸುವ ಅಪರೂಪದ ಚಿತ್ರಗಳಾಗಿವೆ. ಕೆಲವು ಭಾವಚಿತ್ರಗಳು ನೇರವಾದ ಮುಖಗಳಿಂದ ಕೂಡಿದ್ದರೆ, ಇನ್ನೂ ಕೆಲವು ಭಾವಚಿತ್ರಗಳು ಅಡ್ಡಮುಖದಿಂದ ಕೂಡಿವೆ.

ಭಾವಚಿತ್ರ (ಸ್ಟಂಪಿಂಗ್ ಪೌಡರ್)

ಸಂಯೋಜನ ಚಿತ್ರಗಳು (Composition Paintings)

ಆರ್.ಜಿ. ರಾಯಕರ ಅವರು ರಚಿಸಿದ ಸಂಯೋಜನ ಚಿತ್ರಗಳಲ್ಲಿ ವಿಷಯಾಧರಿಸಿ ರಚನೆಗೊಂಡ ಚಿತ್ರಗಳೇ ಹೆಚ್ಚಾಗಿದ್ದು, ಇವೆಲ್ಲಾ ಚಿತ್ರಾತ್ಮಕ ಸಂಯೋಜನೆ (Pictorial Composition) ಗಳಾಗಿವೆ. ದೀಪಾವಳಿ ದೃಶ್ಯ, ತಂಬೂರಿ ನುಡಿಸುತ್ತಿರುವ ಮಹಿಳೆ, ಬುಟ್ಟಿಗಳನ್ನು ಮಾರಾಟ ಮಾಡಲು ಹೊರಟ ಮಹಿಳೆ, ನೀರು ತರುತ್ತಿರುವ ಮಹಿಳೆಯರು, ಹೂದಾನಿಗಳನ್ನು ತಯಾರಿಸುತ್ತಿರುವ ಮಹಿಳೆಯರು, ವನಭೋಜನ, ಹೊಲಕೆ ಹೊರಟಿರುವ ರೈತ ಕುಟುಂಬ ಹೀಗೆ ಗ್ರಾಮೀಣ ಪ್ರದೇಶದ ಹಲವು ದೃಶ್ಯಗಳು ಇವರ ಸಂಯೋಜನ ಚಿತ್ರಗಳಲ್ಲಿ ಕಲಾತ್ಮಕ ರೂಪು ಪಡೆದಿವೆ. ಇವರ ಕೆಲವು ಸಂಯೋಜನ ಚಿತ್ರಗಳಲ್ಲಿ ಭಾರತೀಯ ಕಲೆಯಲ್ಲಿರುವ ಅಲಂಕರಣದ ಗುಣಗಳು ಗಮನಾರ್ಹವಾಗಿ ಮೂಡಿಬಂದಿವೆ. ಭಾರತದ ಶ್ರೇಷ್ಠ ಚಿತ್ರಕಲಾವಿದರಾದ ಅವನೀಂದ್ರನಾಥ ಟ್ಯಾಗೋರ್ ಮತ್ತು ನಂದಲಾಲ್ ಭೋಸ್ ಅವರ ಚಿತ್ರಕಲಾ ಶೈಲಿಯಿಂದ ಆಕರ್ಷಿತರಾಗಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ರಾಯಕರರು ರಚಿಸಿದ ಮೂಲ ಸಂಯೋಜನ ಚಿತ್ರಗಳು ನೋಡಲು ಲಭ್ಯವಿಲ್ಲ ಆದರೆ ಇವರ ಪುತ್ರ ಅನಂತ ರಾಯಕರ ಅವರ ಸಂಗ್ರಹದಲ್ಲಿರುವ ಮೂಲ ಸಂಯೋಜನ ಚಿತ್ರಗಳ ಛಾಯಾಚಿತ್ರಗಳನ್ನು ಅಧ್ಯಯನಕ್ಕೆ ಬಳಸಿಕೊಂಡು, ಇಲ್ಲಿ ಕೆಲವು ಸಂಯೋಜನ ಚಿತ್ರಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.

ದೀಪಾವಳಿ ಹಬ್ಬ: ದೀಪಾವಳಿ ಹಬ್ಬದ ದೃಶ್ಯವನ್ನು ಕುರಿತು ಜಲವರ್ಣ ಮಾಧ್ಯಮದ ಚಿತ್ರಕಲಾಕೃತಿ ಯೊಂದರಲ್ಲಿ ಐವರು ಮಹಿಳೆಯರು ಕೈಯಲ್ಲಿ ದೀಪ ಹಿಡಿದುಕೊಂಡು ನೃತ್ಯ ಮಾಡುತ್ತಿರುವುದನ್ನು

ಚಿತ್ರಿಸಲಾಗಿದೆ. ಮಹಿಳೆಯರ ಉಡುಗೆ-ತೊಡುಗೆಗಳನ್ನು ಜನಪದ ಶೈಲಿಯಲ್ಲಿ ತೋರಿಸಲಾಗಿದೆ. ನೀಲಿ, ಹಳದಿ, ಕೆಂಪು ಮತ್ತು ಬೂದಿ ಬಣ್ಣಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಹಿನ್ನೆಲೆಯಲ್ಲಿ ಜನಪದ ವಾಸ್ತುಶಿಲ್ಪದಲ್ಲಿ ನಿರ್ಮಾಣಗೊಂಡ ಎರಡು ಚಿಕ್ಕ ಗುಡಿಸಲು ಮನೆಗಳು, ಇನ್ನೊಂದೆಡೆಗೆ ದನಗಳು ಇರುವ ಕೊಟ್ಟಿಗೆ ಮತ್ತು ಗಿಡಗಳನ್ನು ಚಿತ್ರಿಸಲಾಗಿದೆ. ಮುನ್ನೆಲೆಯಲ್ಲಿ ತುಳಸಿ ಗಿಡದ ಕಟ್ಟೆ, ಕಟ್ಟೆಯ ಮೇಲೆ ಹಣತೆಗಳು, ಪಕ್ಕದಲ್ಲಿ ಸಣ್ಣ ಗಾತ್ರದ ಮೂರು ಗಿಡಗಳನ್ನು ಚಿತ್ರಿಸಲಾಗಿದೆ. ವರ್ಣ, ರೇಖೆ ಮತ್ತು ಚಿತ್ರಿತ ವಸ್ತು-ವಿಷಯದ ಸಮತೋಲನದಿಂದ ಈ ಚಿತ್ರಕಲಾಕೃತಿಯು ಸುಂದರ ಸಂಯೋಜನೆಯನ್ನು ಪಡೆದಿದೆ. ಈ ಕಲಾಕೃತಿಯಲ್ಲಿ ಖ್ಯಾತ ಚಿತ್ರಕಲಾವಿದ ಎ.ಎ. ಆಲಮೇಲಕರ್ ಅವರ ಕಲಾಕೃತಿಗಳ ಪ್ರೇರಣೆ ಮತ್ತು ಪ್ರಭಾವವನ್ನು ಗಮನಿಸಬಹುದಾಗಿದೆ.

ತಂಬೂರಿ ನುಡಿಸುತ್ತಿರುವ ಮಹಿಳೆ: ತಂಬೂರಿ ನುಡಿಸುವುದರಲ್ಲಿ ಮಗ್ನಳಾಗಿರುವ ಮಹಿಳೆಯ ಚಿತ್ರವೊಂದು ವಿಶಿಷ್ಟ ಸಂಯೋಜನೆಯಿಂದ ಗಮನಾರ್ಹವಾಗಿ ಮೂಡಿದ್ದು, ಸರಳತೆಯಿಂದಲೂ ಗಮನ ಸೆಳೆಯುತ್ತದೆ. ಈ ಚಿತ್ರದಲ್ಲಿ ಹಸಿರು, ನೀಲಿ, ಹಳದಿ, ಕೆಂಪು ಮತ್ತು ಕಂದು ಬಣ್ಣಗಳ ಮಿಶ್ರಕ್ರಿಯೆ ಸೂಕ್ತವಾಗಿ ಬಳಸಿಕೊಂಡು, ವರ್ಣ ಸಮತೋಲನ ಕಾಯ್ದುಕೊಳ್ಳಲಾಗಿದೆ. ತಂಬೂರಿ ನುಡಿಸುವುದರಲ್ಲಿ ತಲ್ಲೀನವಾಗಿರುವ ಮಹಿಳೆ ತನ್ನನ್ನು ತಾನು ಮರೆತು ಸಂಗೀತದಲ್ಲಿ ಅತೀಂದ್ರಿಯ ಅನುಭವ ಈ ಕಲಾಕೃತಿ ನೀಡುತ್ತದೆ. ಹೊರರೇಖೆಗಳಿಂದ ಆರಂಭವಾಗಿ ತೀವ್ರತರವಾದ ಚಲನೆ ಪಡೆದುಕೊಳ್ಳುವ ಕಲಾಕೃತಿಯಲ್ಲಿ ಸೃಜನಶೀಲತೆಯ ಲವಲವಿಕೆಯನ್ನು ಕಾಣಬಹುದಾಗಿದೆ. ಕುಂಚದ ರಭಸದ ಬೀಸುಗಳಿಗೆ ಮಿಡಿದ ವರ್ಣಗಳು ಕಲಾಕೃತಿಯ ಭಾವ ಪ್ರತಿಪಾದನೆಗೆ ಪೂರಕವಾಗಿವೆ.

ಹೂದಾನಿಗಳಿಗೆ ಬಣ್ಣ ಹಚ್ಚುತ್ತಿರುವ ಮಹಿಳೆಯರು: ಐದು ಜನ ಮಹಿಳೆಯರು ಹೂದಾನಿಗಳಿಗೆ ಬಣ್ಣ ಹಚ್ಚುತ್ತಿರುವ ದೃಶ್ಯನ್ನೊಳಗೊಂಡ ಜಲವರ್ಣದ ಚಿತ್ರವು ಒಂದು ಉತ್ತಮ ಚಿತ್ರಾತ್ಮಕ ಸಂಯೋಜನೆ (Pictorial Composition) ಯಾಗಿದೆ. ಇದು ಅಲಂಕಾರಿಕ ಶೈಲಿ (Decorative Style) ಯಲ್ಲಿ ಸಂಯೋಜನೆಗೊಂಡ ಕಲಾಕೃತಿಯಾಗಿದ್ದು, ಮಹಿಳೆಯರು ಧರಿಸಿರುವ ಉಡುಪುಗಳ ಬಣ್ಣ, ಮೈಬಣ್ಣ ಮತ್ತು ಹೂದಾನಿಗಳ ಬಣ್ಣ ಪುನರಾವರ್ತಿತಗೊಳಿಸಿರುವುದರಿಂದ, ಕಲಾಕೃತಿಯು ಬಣ್ಣಗಳ ಸಮತೋಲನವನ್ನು ಕಾಯ್ದುಕೊಂಡಿದೆ. ಕಲಾಕೃತಿಯ ಹಿನ್ನೆಲೆಯಲ್ಲಿರುವ ಮನೆಯ ಗೋಡೆಯನ್ನು ನೀಲಿ ಮತ್ತು ಕೆಂಪು ಬಣ್ಣದಲ್ಲಿ ತೋರಿಸಿದ್ದು, ಮುನ್ನೆಲೆಯನ್ನು ಕಂದು (Brown) ಬಣ್ಣದಲ್ಲಿ ತೋರಿಸಲಾಗಿದೆ. ಈ ಚಿತ್ರದಲ್ಲಿ ಸಂಯೋಜನೆಗೊಂಡಿರುವ ಮನುಷ್ಯಾಕೃತಿಗಳೆಲ್ಲವೂ ಕಾರ್ಯ ಪ್ರವೃತ್ತಿಯಾಗಿರುವುದರಿಂದ ಕಲಾಕೃತಿಗೆ ಒಂದು ರೀತಿಯ ಚಲನಶೀಲ ಗುಣ ಬಂದಿದೆ.

ಯಾತ್ರೆಗೆ ಹೊರಟಿರುವ ದೃಶ್ಯ: ಇದೊಂದು ಜಲವರ್ಣದ ಸಂಯೋಜನೆಯಾಗಿದ್ದು, ಈ ಕಲಾಕೃತಿಯಲ್ಲಿ ಹನ್ನೆರಡು ಜನರುಳ್ಳ ಕುಟುಂಬವೊಂದು ಯಾತ್ರೆಗೆ ಹೊರಟಿರುವ ದೃಶ್ಯವನ್ನು ಅತ್ಯಂತ ಸುಂದರವಾಗಿ ಸಂಯೋಜಿಸಿದ್ದಾರೆ. ಇಡೀ ಕುಟುಂಬ ವರ್ಗವು ಭಾವನಾತ್ಮಕವಾಗಿ ಯಾತ್ರೆಗೆ ಹೊರಟಿರುವುದನ್ನು ಗಮನಿಸಬಹುದು. ಸ್ಥಳಾವಕಾಶದ ವಿಂಗಡಣೆ, ಬಣ್ಣಗಳ ವಿಂಗಡಣೆ ಮತ್ತು ರೇಖೆಗಳ ನಿಖರತೆ ಗಮನಾರ್ಹವಾಗಿ ಮೂಡಿ ಬಂದಿವೆ. ಬಿಳಿ, ತಿಳಿ ಗುಲಾಬಿ, ತಿಳಿ ಹಸಿರು ಮತ್ತು ತಿಳಿ ಹಳದಿ ಹೀಗೆ ತಿಳಿ ವರ್ಣಗಳನ್ನೇ ಈ ಕಲಾಕೃತಿಯಲ್ಲಿ ಹೆಚ್ಚಾಗಿ ಬಳಸಲಾಗಿದೆ. ಕಿರುರೂಪ ಚಿತ್ರಗಳ (Miniature Painting) ಪ್ರಭಾವವನ್ನು ಈ ಕಲಾಕೃತಿಯಲ್ಲಿ ಗುರುತಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಮನುಷ್ಯಾಕೃತಿ

ಗಳಿದ್ದರೂ, ಕಲಾಕೃತಿ ವೀಕ್ಷಿಸಲು ಯಾವುದೇ ಗೊಂದಲಾಗದಂತೆ ಸಂಯೋಜನೆ ಮಾಡಲಾಗಿದೆ. ಈ ಕಲಾಕೃತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಹೂ, ಹಣ್ಣು, ಗಿಡ-ಮರ ಮತ್ತು ಭೂಮಿ-ಆಕಾಶನ್ನೊಳಗೊಂಡ ಪ್ರಕೃತಿಯ ಸಂಪದ್ಭರಿತತೆಯನ್ನು ಕಾಣಬಹುದಾಗಿದೆ. ಬೆಳಕು ಮತ್ತು ವಾತಾವರಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.

ನಿಸರ್ಗಚಿತ್ರಗಳು (Landscapes)

ನಿಸರ್ಗಚಿತ್ರ (ಜಲವರ್ಣ)ದ ವಿಶೇಷವೆಂದರೆ ಪದವಿಟ್ಟೊಡಳು ಪದೊಂದಗ್ಗಳಿಕೆಯಂತೆ, ಒಮ್ಮೆ ಬಣ್ಣ ಲೇಪಿಸಿದರೆ ಮುಗಿಯಿತು ಅಲ್ಲಿ ತಿದ್ದುಪಡಿಗಳಿಗೆ ಅವಕಾಶವೇ ಇಲ್ಲ. ಚಿತ್ರದ ರೂಪುರೇಷ ಮೊದಲೇ ಧ್ಯಾನಸ್ಥನಾಗದೆ ರಚಿಸುವುದು ಕಷ್ಟ. ಅಲ್ಲದೆ ಅದೊಂದು ಪಾರದರ್ಶಕ ಕಲೆ, ಅತಿಸೂಕ್ಷ್ಮ, ರಾಯಕರರು ಮೂಲತಃ ಗ್ರಾಮೀಣ ಪರಿಸರದ ನೆಲೆಯವರು. ಹಾಗಾಗಿ ಅವರಿಂದ ನೆಲ, ಜಲ, ಆಕಾಶ, ಗಿಡ-ಮರಗಳು ಪ್ರೀತಿಯಿಂದ ಚಿತ್ರಿಸಲ್ಪಟ್ಟಿವೆ. ಬದಾಮಿ, ಪಟ್ಟದಕಲ್ಲು, ಹಂಪೆ, ಕಾರವಾರ ಮತ್ತು ಯಾಣದ ಹಲವಾರು ಭೂದೃಶ್ಯ ಚಿತ್ರಗಳನ್ನು ಜಲವರ್ಣದಲ್ಲಿ ಬಿಡಿಸುವ ಮೂಲಕ ಮಹತ್ಕಾರ್ಯ ಸಾಧಿಸಿದ್ದಾರೆ. ಇವರು ರಚಿಸಿದ ನಿಸರ್ಗಚಿತ್ರಗಳು ಒಂದು ಕಾಲದ ದಾಖಲೆಗಳಾಗಿ ಉಳಿದುಕೊಂಡಿವೆ.

ರೇಖಾಚಿತ್ರಗಳು (Drawings)

ರೇಖಾಚಿತ್ರಗಳ ಇತಿಹಾಸ ಮಾನವನ ಇತಿಹಾಸದಷ್ಟೇ ಪ್ರಾಚೀನ. ಮಾನವ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಬಳಸಿದ ಶಕ್ತಿಯುತವಾದ ಮಾಧ್ಯಮ. ಕಲಾವಿದ ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ನೋಡಿದ ಗಿಡ, ಬಳ್ಳಿ, ಹೂ, ಎಲೆಗಳು, ತಾನು ನೋಡಿದ ದೃಶ್ಯಗಳು, ತನ್ನ ಆಂತರ್ಯದ ತುಮುಲಗಳನ್ನು ವಿವಿಧ ಮಾಧ್ಯಮಗಳಲ್ಲಿ ಹೊರಹಾಕುತ್ತ ಬಂದಿದ್ದಾನೆ. ಇಲ್ಲಿ ಚಿತ್ರಕಲಾವಿದನ ಕೈಚಳಕ, ಕುಂಚದ ರಭಸ, ತಾಂತ್ರಿಕತೆ ಮತ್ತು ತನ್ನ ಶೈಲಿಗೆ ಅನುಗುಣವಾಗಿ ಚಿತ್ರಿಸುತ್ತ ಬಂದಿದ್ದಾನೆ. ಇಂತಹ ರೇಖಾಚಿತ್ರಗಳು ಚಿತ್ರಕಲಾವಿದನ ನೈಪುಣ್ಯತೆಯನ್ನು ತೋರಿಸುತ್ತದೆ. ರಾಯಕರ ಅವರು ತಮ್ಮ ಜೀವಿತ ಅವಧಿಯಲ್ಲಿ ಸಾಕಷ್ಟು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಆದರೆ ಅವುಗಳನ್ನೆಲ್ಲಾ ಸಂಗ್ರಹಿಸಿ ಇಟ್ಟಿಲ್ಲ. ಪ್ರಸ್ತುತ ಅವರ ಮಗ ಅನಂತ ರಾಯಕರ ಅವರ ಸಂಗ್ರಹದಲ್ಲಿ ನಾಲ್ಕೈದು ರೇಖಾಚಿತ್ರಗಳ ಛಾಯಾಚಿತ್ರಗಳನ್ನು ಮಾತ್ರ ನೋಡಲು ಸಿಗುತ್ತವೆ.

ಕುದುರೆ ಸವಾರಿ ಮಾಡುತ್ತಿರುವ ವ್ಯಕ್ತಿಯ ರೇಖಾಚಿತ್ರವನ್ನು ಇಂಡಿಯನ್ ಇಂಕ್ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಯೋಧನೊಬ್ಬನು ವೇಗವಾಗಿ ಚಲಿಸುತ್ತಿರುವ ಕುದುರೆ ಮೇಲೆ ಕುಳಿತು ಯುದ್ಧಕ್ಕೆ ಹೊರಟಿರುವ ದೃಶ್ಯ ಇದಾಗಿದೆ. ವೇಗವಾಗಿ ತೀವ್ರಗತಿಯಲ್ಲಿ ಮಾಡಿದ ರೇಖಾಚಿತ್ರಗಳು ಕುದುರೆಯ ಚಲನೆಯ ಸೂಚಕವಾಗಿವೆ. ರೇಖೆಗಳಲ್ಲಿಯೇ ನೆರಳು-ಬೆಳಕು ತೋರಿಸಲು ಪ್ರಯತ್ನಿಸಿದ್ದಾರೆ. ಈ ರೇಖಾಚಿತ್ರವನ್ನು ಚಿಕ್ಕ ಅಳತೆಯಲ್ಲಿ ಪೇಪರ್ ಮೇಲೆ ರಚಿಸಲಾಗಿದ್ದು, ಇದೊಂದು ಇಲ್ಯುಸ್ಟ್ರೇಷನ್ ಚಿತ್ರದಂತೆ ಕಾಣುತ್ತದೆ.

ಇವರು ಇನ್ನೊಂದು ಅಲಂಕಾರಿಕವಾಗಿ ಚಿತ್ರಿಸಿರುವ ಮಹಿಳೆಯ ರೇಖಾಭಾವಚಿತ್ರವೊಂದು ರೇಖೆಗಳ ಸೌಂದರ್ಯ ಪ್ರಜ್ಞೆಯಿಂದಾಗಿ ನೋಡುಗರನ್ನು ಸುಲಭವಾಗಿ ಆಕರ್ಷಿಸುತ್ತದೆ. ತಲೆಗೆ ಹೂವನ್ನು ಮುಡಿದು, ಮೂಗಿಗೆ ಮೂಗುತಿ, ಕಿವಿಗೆ ಓಲೆಯನ್ನು ಧರಿಸಿಕೊಂಡಿರುವ ಮಹಿಳೆಯ ಭಾವನೆಗಳನ್ನು

ಅತೀ ಕಡಿಮೆ ರೇಖೆಗಳಲ್ಲಿ ಪರಿಣಾಮಕಾರಿ ಚಿತ್ರಣ ಮಾಡಿದ್ದಾರೆ. ಈ ರೇಖಾಚಿತ್ರವನ್ನು ಇಂಡಿಯನ್ ಇಂಕ್ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ.

ರಾಯಕರ ಅವರು ಇಂಡಿಯನ್ ಇಂಕ್ ಮಾಧ್ಯಮದಲ್ಲಿ ಚಿತ್ರಿಸಿದ ರೇಖಾಚಿತ್ರವೊಂದು ಅವರ ಪುತ್ರ ಅನಂತ ರಾಯಕರ ಅವರ ಸಂಗ್ರಹದಲ್ಲಿದೆ. ಮಹಿಳೆಯೊಬ್ಬಳು ಮನೆಯ ಹೊರಾಂಗಣದಲ್ಲಿರುವ ಮೆಟ್ಟಿಲು ಹತ್ತಿ ಹೊರಗೆ ಹೋಗುತ್ತಿರುವ ಸಂದರ್ಭವನ್ನು ಚಿತ್ರಿಸಲಾಗಿದೆ. ಮಹಿಳೆಯ ಧರಿಸಿದ ಸೀರೆಯಲ್ಲಿ ನಿರಿಗೆ ಮತ್ತು ಬೆಳಕನ್ನು ಸಮರ್ಪಕವಾಗಿ ತೋರಿಸಿದ್ದು, ಈ ರೇಖಾಚಿತ್ರದಲ್ಲಿ ಕಡಿಮೆ ವಿವರಗಳಿವೆ. ಸರಳ ಮತ್ತು ಅಂದವಾಗಿ ಮೂಡಿದ ರೂಪರೇಖೆ (ಸ್ಕೆಚ್) ಅಥವಾ ಸ್ಮರಣಚಿತ್ರದಂತೆ ಕಂಡರೂ. ಯಥಾದೃಶ್ಯ ರೂಪಣವು ಒಳಗೊಂಡಿದೆ. ಮನೆಯ ಮೆಟ್ಟಿಲು ಕಟ್ಟೆ ಮತ್ತು ಹೊರಗಡೆ ಕಾಣುವ ಗಿಡವನ್ನು ಸಂಯೋಜನಾ ದೃಷ್ಟಿಯಿಂದ ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ವಿನ್ಯಾಸಗಳು (Designs)

ಆರ್.ಜಿ. ರಾಯಕರ ಅವರು ಅನೇಕ ಸ್ಮರಣ ಸಂಚಿಕೆಗಳ ಮತ್ತು ಪುಸ್ತಕಗಳ ಮುಖಪುಟ ಚಿತ್ರಗಳನ್ನು ರಚಿಸಿದ್ದಲ್ಲದೇ, ಸರ್ಟಿಫಿಕೇಟ್‌ಗಳ ಬಾರ್ಡರ್‌ಗಳಿಗೆ ವಿನ್ಯಾಸ (Design) ವನ್ನು ಕೈಯಿಂದಲೇ ರಚಿಸಿ ಕೊಡುತ್ತಿದ್ದರು. ರಾಜ್ಯದ ಸುಮಾರು 15ಕ್ಕೂ ಹೆಚ್ಚು ಸಂಘ-ಸಂಸ್ಥೆಗಳಿಗೆ ಟ್ರೆಡ್‌ಮಾರ್ಕ್‌ಗಳನ್ನು ಅರ್ಥಗರ್ಭಿತವಾಗಿ ವಿನ್ಯಾಸಗೊಳಿಸಿಕೊಟ್ಟಿದ್ದಾರೆ. ಅನೇಕ ಸರ್ಕಾರಿ ಇಲಾಖೆಗಳಿಗೆ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳಿಗೆ ಸ್ತಬ್ಧಚಿತ್ರಗಳನ್ನು ನಿರ್ಮಿಸಿದ್ದಾರೆ.

ರಾಯಕರರು ಬರೆದ ಪುಸ್ತಕಗಳು

ಬಹುಮುಖ ವ್ಯಕ್ತಿತ್ವದ ಆರ್.ಜಿ. ರಾಯಕರರು ಚಿತ್ರಕಲಾ ಶಿಕ್ಷಕ ವೃತ್ತಿಯೊಂದಿಗೆ ಬರವಣಿಗೆಯನ್ನು ರೂಢಿಸಿಕೊಂಡು ಬಂದ ರಾಯಕರ ಅವರ ಹಲವಾರು ಗ್ರಂಥಗಳು ನಮಗೆ ನಿದರ್ಶನವಾಗಿವೆ. ಇಲ್ಲಿ ಅವರ ಕೆಲವು ಪ್ರಮುಖ ಕೃತಿಗಳನ್ನು ಗಮನಿಸಬಹುದಾಗಿದೆ. ಇವರ ಸಾಹಿತ್ಯವನ್ನು ದೃಶ್ಯಕಲೆ ಮತ್ತು ದೃಶ್ಯೇತರ ಸಾಹಿತ್ಯವೆಂದು ವಿಂಗಡಿಸಬಹುದಾಗಿದೆ.

ದೃಶ್ಯೇತರ ಸಾಹಿತ್ಯ ಕೃತಿಗಳು: 1. ಕರ್ನಾಟಕದ ಜಲಪಾತಗಳು, 2. ಕರ್ನಾಟಕದಲ್ಲಿ ಗಿರಿಧಾಮಗಳು, 3. ಎದ್ದೇಳಿ, 4. ಕರ್ನಾಟಕದಲ್ಲಿ ಚಿನ್ನಬೆಳ್ಳಿಯ ಕುಶಲಕಲೆ, ಕೈಗಾರಿಕೆ, 5. ಬದುಕು, 6. ಜೀವನದ ಧ್ಯೇಯ, 7. ರಾಷ್ಟ್ರೀಯ ಚಾರಿತ್ರ, 8. ಶ್ರೀ ಮಾರಿಕಾಂಬಾ ದೇವಾಲಯ ಶಿರಸಿ, 9. ಮಾರಿಕಾಂಬ ಪ್ರಶಸ್ತಿ, 10. ಸೊಬಗಿನ ಶಿರಸಿ, 11. ಸೋಂದಾ ದರ್ಶನ, 12. ಶಿರಸಿ ಮತ್ತು ಸುತ್ತಮುತ್ತ, 13. ಡಾ. ಆರ್.ಎ. ಹೆಗಡೆ. 14. ನನ್ನ ಪ್ರೀತಿಯ ಕಮಲಾ,

ದೃಶ್ಯಕಲಾ ಸಾಹಿತ್ಯ ಕೃತಿಗಳು: 1. ಭಾರತೀಯ ಚಿತ್ರಕಲೆ 2. ಬಸವರಾಜ ಹಳಿಜೋಳ

ಭಾರತೀಯ ಚಿತ್ರಕಲೆ

ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ ಜನಪ್ರಿಯ ಕಲಾಮಾಲಿಕೆ ಅಡಿಯಲ್ಲಿ ಆರ್.ಜಿ. ರಾಯಕರ ಅವರು ಬರೆದ ಕೃತಿ ಇದಾಗಿದೆ. ಈ ಕೃತಿಯು ಭಾರತೀಯ ಚಿತ್ರಕಲೆಯ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದೆ. ಶಿಲಾಯುಗದಿಂದ ಹಿಡಿದು ಆದಿಮ ಗುಹಾಚಿತ್ರಗಳು, ಸಿಂಧೂ ಸಂಸ್ಕೃತಿಯ ಕಲೆ,

ವೇದ ಯುಗದಲ್ಲಿ ಚಿತ್ರಕಲೆ, ಬೌದ್ಧ ಚಿತ್ರಕಲೆ, ಅಜಂತಾ ಚಿತ್ರಕಲೆ, ಬಾದಾಮಿಯ ಚಿತ್ರಕಲೆ, ಚೋಳರ ಕಲೆ, ಜೈನ ಚಿತ್ರಕಲೆ, ದಖ್ಖನಿ ಚಿತ್ರಕಲೆ, ವಿಜಯನಗರ ಚಿತ್ರಕಲೆ, ಮೊಘಲ್ ಚಿತ್ರಕಲೆ, ರಜಪೂತ ಚಿತ್ರಕಲೆ, ಬಂಗಾಳ ಕಲೆ ಮತ್ತು ಮೈಸೂರು ಚಿತ್ರಕಲೆಯವರೆಗೆ ಹಂತ ಹಂತವಾಗಿ ಬೆಳೆದು ಬಂದ ಚಿತ್ರಕಲೆಯ ಸಂಕ್ಷಿಪ್ತವಾದ ಮಾಹಿತಿಯನ್ನು ಕೊಡುವಂತಹ ಕೃತಿ ಇದಾಗಿದೆ. ದೃಶ್ಯಕಲಾ ಅಧ್ಯಯನದ ವಿದ್ಯಾರ್ಥಿಗಳಿಗೆ ಈ ಗ್ರಂಥವು ಅತ್ಯಂತ ಪ್ರಯೋಜನಕಾರಿಯಾಗಿದೆ. 1996ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಈ ಪುಸ್ತಕವನ್ನು ಪ್ರಕಟಿಸಿದೆ.

ಬಸವರಾಜ ಹಳಿಜೋಳ

ಉತ್ತರ ಕರ್ನಾಟಕದ ಶ್ರೇಷ್ಠ ಭಾವಚಿತ್ರಕಲಾವಿದ ಬಸವರಾಜ ಹಳಿಜೋಳ ಅವರ ಪ್ರೀತಿಯ ಶಿಷ್ಯರಾಗಿದ್ದ ಆರ್.ಜಿ. ರಾಯಕರ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ ಹಳಿಜೋಳರ ಕುರಿತು ಚಿಕ್ಕ ಪುಸ್ತಕವೊಂದನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಬಸವರಾಜ ಹಳಿಜೋಳ ಅವರ ಬಾಲ್ಯ ಜೀವನ, ಅವರ ಬದುಕಿನ ಸಾಹಸ ಕ್ಷಣಗಳು, ಮುಂಬಯಿ ನಗರದೊಂದಿಗಿನ ಒಡನಾಟ, ಹುಬ್ಬಳ್ಳಿಯ ಬಸವರಾಜ ಸ್ಟುಡಿಯೋ, ಡಾ. ಎಂ.ವಿ. ಮಿಣಜಿಗಿಯವರು 1955ರಲ್ಲಿ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದ ಕಲಾಮಂದಿರ, ಹಳಿಜೋಳರು ಕಲಾಮಂದಿರದ ಪ್ರಾಚಾರ್ಯರಾಗಿ ಸಲ್ಲಿಸಿದ ಸೇವೆ, ಹಳಿಜೋಳರ ಜೀವನದ ಕೊನೆಯ ದಿನಗಳು ಮತ್ತು ಹಳಿಜೋಳರ ಪ್ರಮುಖ ಕಲಾಕೃತಿಗಳನ್ನು ಕುರಿತು ಈ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಆತ್ಮೀಯರು ಮತ್ತು ಕಲಾ ಗುರುಗಳು ಆಗಿದ್ದ ಬಸವರಾಜ ಹಳಿಜೋಳ ಅವರನ್ನು ಅತ್ಯಂತ ಹತ್ತಿರದಿಂದ ಬಲ್ಲವರಾದ ರಾಯಕರರು ಈ ಪುಸ್ತಕದಲ್ಲಿ ಪ್ರಾಮಾಣಿಕ ಅನಿಸಿಕೆ ಮತ್ತು ಅನೇಕ ಹೊಸ ಸಂಗತಿಗಳನ್ನು ದಾಖಲಿಸಿದ್ದಾರೆ.

ಇವರು ಈ ಮೇಲೆ ತಿಳಿಸಿದ ಪುಸ್ತಕಗಳಲ್ಲದೆ ಜಿಲ್ಲಾ ಮತ್ತು ರಾಜ್ಯಮಟ್ಟದ ಸುಮಾರು 90 ಸ್ಮರಣ ಸಂಚಿಕೆಗಳನ್ನು ಹೊರ ತಂದಿರುವರು. ಸಂಚಿಕೆಯ ಸಂಪಾದಕರಾಗಿ, ಸಂಚಾಲಕರಾಗಿ, ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಕನ್ನಡ ಮತ್ತು ಆಂಗ್ಲ್ ಭಾಷೆಯಲ್ಲಿನ ಬರವಣಿಗೆ ಹೆಚ್ಚು ಆಕರ್ಷಕ, ಧಾರವಾಡ, ಕಾರವಾರ ಆಕಾಶವಾಣಿಯಲ್ಲಿ ಇವರ ಭಾಷಣ ಮತ್ತು ಚಿಂತನೆಗಳು ನಿರಂತರವಾಗಿ ಪ್ರಸಾರವಾಗಿವೆ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಲಾವಾರ್ತೆ ಮತ್ತು ಚಿತ್ರಕಲಾ ಪ್ರಪಂಚಕ್ಕೆ ಅನೇಕ ಲೇಖನಗಳನ್ನು ಬರೆದಿದ್ದಾರೆ.

ರಾಯಕರರ ಗ್ರಂಥಾಲಯ ಮತ್ತು ಮ್ಯೂಸಿಯಮ್

ಕರ್ನಾಟಕ ರಾಜ್ಯದಲ್ಲಿ ಏಕವ್ಯಕ್ತಿ ಗ್ರಂಥಾಲಯ ಲೋಕಕ್ಕೆ ಪರಿಚಿತರಾದ ರಾಯಕರರು ಸುಮಾರು 10,000ಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಇವರ ಗ್ರಂಥಾಲಯದಲ್ಲಿ ಕಲೆ, ಕಲಾಶಿಕ್ಷಣ, ಶಿಲ್ಪಕಲೆ, ವಾಸ್ತುಶಿಲ್ಪ, ಧಾರ್ಮಿಕ, ಸಾಂಸ್ಕೃತಿಕ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಸಾಹಿತ್ಯ, ಶಿಕ್ಷಣ, ಚಿಂತನೆ, ಯೋಗ, ಅಭಿನಂದನಾ ಗ್ರಂಥ, ಸ್ಮರಣ ಸಂಚಿಕೆ, ನೈತಿಕ ಶಿಕ್ಷಣ, ಇತಿಹಾಸ, ಕಲಾವಿದರ ಪರಿಚಯ, ನಾಟಕ, ಮಹಾಕಾವ್ಯ, ಜ್ಞಾನಪೀಠ ಪ್ರಶಸ್ತಿ ವಿಜೇತರು, ಶಾಸನ, ಕಾದಂಬರಿ, ಗೆಝೆಟಿಯರ್, ವಿಶ್ವಕೋಶ, ಕಲಾ ವಿಶ್ವಕೋಶ. ಹೀಗೆ ಅನೇಕ ಮಹತ್ವದ ಮತ್ತು ಅಪರೂಪದ ಪುಸ್ತಕಗಳ ಸಂಗ್ರಹವಿದೆ. ಇದಲ್ಲದೇ ನೂರು ವರ್ಷ ಹಿಂದಿನಿಂದ ಇಂದಿನವರಗಿನ ಪತ್ರಿಕೆಗಳು, ಧಾರ್ಮಿಕ, ಸಾಮಾಜಿಕ,

ಜಿಯೋಗ್ರಫಿಕಲ್ ಮ್ಯಾಗಝೀನ್, ಆರ್ಟ್ ಇಂಡಿಯಾ, ಮಾರ್ಗ. ಹೀಗೆ ಕಲಾ ಪತ್ರಿಕೆಗಳ ಬೃಹತ್ ಸಂಗ್ರಹಗಳನ್ನು ಕಾದಿಡಲಾಗಿದೆ.

ಇವರು ಇದೇ ರೀತಿ ಅನೇಕ ಪ್ರಾಚೀನ ವಸ್ತುಗಳನ್ನು ಕೂಡಾ ಸಂಗ್ರಹಿಸಿದ್ದಾರೆ. ಹಳೆಯ ನಾಣ್ಯ ಮತ್ತು ನೋಟ್‌ಗಳ ಸಂಗ್ರಹ, ಸ್ಟಾಂಪುಗಳು, ಪಾರಿತೋಷಕಗಳು, ವಿವಿಧ ಮಾಧ್ಯಮದ ಮೂರ್ತಿಶಿಲ್ಪಗಳು, ಕುಸರಿ ಕೆತ್ತನೆ, ಲೋಹದ ವಸ್ತುಗಳು, ಕಲ್ಲುಗಳು, ಗೊಂಬೆಗಳು, ಮುಖವಾಡಗಳು, ಪ್ರಥಮ ಅಂಚೆ ಲಕೋಟೆಗಳು, ಪ್ರಖ್ಯಾತರು ಬರೆದ ಪತ್ರಗಳು, ಕಪ್ಪು–ಬಿಳುಪಿನ ಛಾಯಾಚಿತ್ರಗಳು, ನೆನಪಿನ ಕಾಣಿಕೆಗಳು ಹೀಗೆ ಅಪೂರ್ವ ಪ್ರಾಚೀನ ಕಲಾ ವಸ್ತುಗಳ ಬೃಹತ್ ಸಂಗ್ರಹಾಲಯ ಮನೆಯಲ್ಲೇ ನಿರ್ಮಿಸಿಕೊಂಡು, ಅದಕ್ಕೆ ಅವರ ಪ್ರೀತಿಯ ಮಡಿದಿಯ ನೆನಪಿಗಾಗಿ ಕಮಲಾ ಆರ್.ಜಿ. ರಾಯಕರ ವಸ್ತು ಸಂಗ್ರಹಾಲಯ ಎಂದು ಹೆಸರಿಟ್ಟಿದ್ದರು. ಯಾವುದೇ ಮಾಹಿತಿ–ದಾಖಲಾತಿ ಬೇಕಾದವರು ರಾಯಕರರನ್ನು ಭೇಟಿ ಮಾಡುತ್ತಿದ್ದರು. ಅನೇಕ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳು ಇವರ ಗ್ರಂಥಾಲಯ ಮತ್ತು ವಸ್ತು ಸಂಗ್ರಹಾಲಯದಿಂದ ಸಾಕಷ್ಟು ಪ್ರಯೋಜನ ಪಡೆದುಕೊಂಡಿದ್ದಾರೆ. ರಾಯಕರರ ಅವರು ತಮ್ಮ ಬದುಕಿನುದ್ದಕ್ಕೂ ಪ್ರಾಚೀನ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ ಈ ಮಹತ್ಸಾಧನೆಗೆ ಕಾರಣವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಆರ್.ಜಿ. ರಾಯಕರ ಅವರು ಕೈಗೊಂಡ ಪ್ರವಾಸಗಳು

ರಾಯಕರರಿಗೆ ಪ್ರವಾಸ ಮಾಡುವ ಹವ್ಯಾಸ ಚಿಕ್ಕಂದಿನಿಂದಲೂ ರೂಢಿಸಿಕೊಂಡಿದ್ದರು. ಭಾರತದ ತುಂಬೆಲ್ಲಾ ತಮ್ಮ ಪತ್ನಿ ಕಮಲಾ ಸಂಗಡ ಅನೇಕ ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಲಾಕೇಂದ್ರಗಳಿಗೆ ಭೇಟಿ ನೀಡಿದ್ದಾರೆ. ಕಲಕತ್ತ, ಶಾಂತಿನಿಕೇತನ, ಸಿಮ್ಲಾ, ದಿಲ್ಲಿ, ಪುರಿ, ವೈಷ್ಣವದೇವಿ, ಅಮೃತಸರ್, ಡಾರ್ಜಿಲಿಂಗ್, ನೇಪಾಳ, ಮುಂಬಯಿ, ಕೊಡಗು, ಗೋವಾ, ಕೇದಾರ, ಬದ್ರಿ, ಹರಿದ್ವಾರ, ಕೊಚ್ಚಿನ್, ತಿರುಪತಿ, ಊಟಿ, ಕೊಡೈಕೆನಾಲ್, ಅಜಂತಾ, ಎಲ್ಲೋರಾ, ಪುಣೆ, ಪಾಂಡಿಚೇರಿ, ಕನ್ಯಾಕುಮಾರಿ, ಕೇರಳ, ಮಹಾಬಲಿಪುರ, ಮದ್ರಾಸ್, ಶಬರೀಮಲೈ ಮುಂತಾದ ಸ್ಥಳಗಳಿಗೆ ಪ್ರವಾಸ ಕೈಗೊಂಡಿದ್ದಾರೆ.

ಇವರು ಕಲಾಸಕ್ತಿ ಮತ್ತು ಕಲಾ ಅಧ್ಯಯನಶೀಲ ಉದ್ದೇಶದಿಂದ ಭಾರತದ ಪ್ರಸಿದ್ಧ ಚಿತ್ರಕಲಾ ಶಾಲೆಗಳಾದ ಶಾಂತಿನಿಕೇತನ, ದೆಹಲಿ ಕಲಾಶಾಲೆ, ಜಯಪುರ ಕಲಾಶಾಲೆ, ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ, ಮದ್ರಾಸ್ ಕಲಾಶಾಲೆ ಮತ್ತು ಆ ನಗರದಲ್ಲಿರುವ ಚಿತ್ರಕಲಾ ಗ್ಯಾಲರಿ ಮತ್ತು ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿ ಅಲ್ಲಿನ ಕಲಾ ನೈಪುಣ್ಯ ಕೊಡುಗೆಯನ್ನೆಲ್ಲಾ ನೋಡಿಕೊಂಡು ಬಂದಿದ್ದಾರೆ.

ರಾಯಕರರು 2006ರಲ್ಲಿ ನಾಲ್ಕು ತಿಂಗಳು ಅಮೆರಿಕಾ ವೀಕ್ಷಿಸಲು ಅವರ ಮೊಮ್ಮಗಳು ಸುನೀತಾ ಹಾಗೂ ಅವಳ ಪತಿ ರಾಜು ಅವರ ಆಮಂತ್ರಣ ಮೇರೆಗೆ ಅವರ ಹಿರಿಯ ಮಗಳು ಸೌ॥ ಪ್ರಭಾವತಿ ದೇವರಾಯ ರೇವಣಕರ ಅವರನ್ನು ಕೂಡಿಕೊಂಡು ಅವರ ವಾಸಸ್ಥಳ ಅಟ್ಲಾಂಟ್‌ಕ್ಕೆ ಹೋಗಿ ಬಂದರು. ಅವರ ಮಾತಿನಲ್ಲೆ ಹೇಳಬೇಕಾದರೆ – ಅಮೆರಿಕಾದ ಪ್ರಮುಖ ಸ್ಥಳಗಳಾದ ನ್ಯೂಯಾರ್ಕ್, ನಯಾಗರ ಜಲಪಾತ, ದೊಡ್ಡ ವೀಕ್ಷಣಾ ಗೋಪುರ, ವಾಷಿಂಗ್ಟನ್, ನ್ಯೂಜರ್ಸಿ, ದೃಶ್ಯಕಲಾ ಗ್ಯಾಲರಿಗಳು, ವಸ್ತು ಸಂಗ್ರಹಾಲಯಗಳು, ಗಗನಚುಂಬಿ ಕಟ್ಟಡಗಳು, ಭಾರತೀಯ ದೇವಾಲಯಗಳ ವೃಂದಾವನ, ಲಿಬರ್ಟಿ ಮೂರ್ತಿ, ಕೈಗಾರಿಕಾ ಕೇಂದ್ರ, ಅನೇಕ ಅಧ್ಯಕ್ಷರ ಮೆಮೊರಿಯಲ್ ಭವ್ಯಕಟ್ಟಡ, ಎಂಪಾಯರ್ ಸ್ಟೇಟ್

ಕಟ್ಟಡ, ಏರ್ ಸ್ಪೇಸ್ ಮ್ಯೂಸಿಯಮ್, ಡಿಸ್ನಿಲ್ಯಾಂಡ್, ಬಾಹ್ಯಾಕಾಶ ಅದ್ಭುತ ಕೇಂದ್ರ, ಕ್ಯಾಸಿನೋ, ಲೈಬ್ರೆರಿಗಳು, ಅಂಡರ್ ವಾಟರ್ ಅಕ್ವೇರಿಯಂ ಮಾತ್ರ ಅದ್ಭುತ ದೃಶ್ಯ, ಅತ್ಯಾಧುನಿಕ ತಂತ್ರಜ್ಞಾನದ ಗಾಜಿನಿಂದಲೇ ನಿರ್ಮಿಸಿದ ಸಿಟಿಹಾಲ್, ಶಾಲೆಗಳು, ಚರ್ಚುಗಳು, ಮಸೀದಿಗಳು, ದೃಶ್ಯಕಲಾ ಶಾಲೆಗಳು, ಪ್ರಾಣಿ ಸಂಗ್ರಹಾಲಯ ಮುಂತಾದವುಗಳನ್ನು ನೋಡಿದ ಮಧುರ ನೆನಪು. ವಿಶೇಷವಾಗಿ ಇಲ್ಲಿಯ ಜನರು ದ್ರಾಕ್ಷಿರಸದಿಂದ ತಯಾರಿಸಿದ ವೈನ್, ಕೋಕೊಕೋಲಾ ಕುಡಿಯುತ್ತಾರೆ. ಈ ಎಲ್ಲಾವನ್ನು ತಯಾರಿಸುವ ಫ್ಯಾಕ್ಟರಿಗಳು ಅದೊಂದು ಅದ್ಭುತ ತಾಣ. ಇಲ್ಲಿಯ ಜನರಿಗೆ ನಾಳಿನ ಬಗ್ಗೆ ಚಿಂತೆ ಇಲ್ಲ. ಇಂದು ಇಂದಿಗೆ, ನಾಳೆ ನಾಳೆಗೆ ಎನ್ನುವ ತತ್ವ ಅವರದು. ಸ್ತ್ರೀ ಮತ್ತು ಪುರುಷರು ಸಮಾನ ಕೆಲಸ ನಿರ್ವಹಿಸುವರು. ಎಲ್ಲರೂ ಸಮಾನರು ಎನ್ನುವ ಭಾವನೆ ಅವರಲ್ಲಿದೆ. ಈ ಪ್ರವಾಸದ ಒಡನಾಟವನ್ನು ಮರೆಯಲು ಸಾಧ್ಯವೆ ಇಲ್ಲ ಎಂದು ರಾಯಕರರು ಹೇಳಿಕೊಂಡಿದ್ದಾರೆ.

ಅಪರೂಪದ ವ್ಯಕ್ತಿತ್ವ

89 ವಸಂತಗಳನ್ನು ಬದುಕಿದ ಆರ್.ಜಿ. ರಾಯಕರರು ಚಿತ್ರಕಲೆ, ಬರವಣಿಗೆ, ಸಮಾಜ ಸುಧಾರಣೆ, ಧಾರ್ಮಿಕ ಚಿಂತನೆ, ಯೋಗ ಈ ನಿಟ್ಟಿನಲ್ಲಿ ತಮ್ಮದೇ ಆದ ಮಹತ್ವದ ಕೊಡುಗೆ ನೀಡಿ ಜನಮನ ಗೆದ್ದಿದ್ದಾರೆ. ಅವರ ಜೀವನ ಭಾವ, ಜೀವನ ಪ್ರೀತಿ, ಜೀವನವನ್ನು ಅದು ಬಂದಂತೆ ಗೌರವಿಸುವ ಸ್ಥಿತ ಪ್ರಜ್ಞೆ ಎಂಥವರನ್ನು ಬೆರಗುಗೊಳಿಸುತ್ತಿತ್ತು. ರಾಯಕರ ಮಾಸ್ತರ ಎಂದರೆ ಅವರೊಬ್ಬರೇ. ರಾಯಕರರು ಅವರಿಗೆ ಅವರೇ ಹೋಲಿಕೆ. 'ಭೀಷ್ಮರು' ಇದ್ದ ಹಾಗೇ ಎಂದರೆ ಸತ್ಯ. ಕಲೆ, ಕಲಾ ಶಿಕ್ಷಣ ಬಗ್ಗೆ ದುಡಿದ ಅತ್ಯಂತ ಪ್ರಭಾವಶಾಲಿ ನಾಯಕರಾಗಿದ್ದರಿಂದಲೇ ಮೊದಲ ಬಾರಿಗೆ ಚಿತ್ರಕಲಾ ಶಿಕ್ಷಕನೋರ್ವನನ್ನು 2009ರಲ್ಲಿ ರಾಯಚೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ 7ನೇ ಶೈಕ್ಷಣಿಕ ಮಹಾ ಸಮ್ಮೇಳನದ ಅಧ್ಯಕ್ಷರಾಗಿ ನೇಮಿಸಲಾಗಿತ್ತು.

ರಾಯಕರರು ತಮ್ಮ ಕೊನೆಯ ದಿನಗಳಲ್ಲಿ ಅವರ ಮೂರನೇ ಮಗ ಅನಂತ ಮತ್ತು ಅವರ ಪತ್ನಿ ರಾಧಾ ಅವರ ಹೊಸಮನೆಯಲ್ಲಿ ವಾಸವಾಗಿದ್ದರು. ಅವರು ಇವರನ್ನು ಗೌರವದಿಂದ ನೋಡಿ ಕೊಂಡಿರುವರು. ರಾಯಕರರು ಯಾವಾಗಲೂ ಸಂತೋಷದಿಂದ, ಪ್ರಸನ್ನತೆಯಿಂದ ತಮ್ಮ ಸಾಧನೆಯಲ್ಲೇ ಇರುತ್ತಿದ್ದರು. ಇವರು ಅಪಾರ ದೈವಭಕ್ತರಾಗಿದ್ದರು. ಸ್ವಾಮಿ ವಿವೇಕಾನಂದ, ಅರವಿಂದರು, ರಮಣಮಹರ್ಷಿ, ಮಹಾತ್ಮ ಗಾಂಧಿ ಅವರ ಪರಮ ಸದ್ಭಕ್ತರಾಗಿದ್ದರು.

ಟಿಪ್ಪಣಿಗಳು

- ಬಾಲ್ಯದಿಂದಲೇ ದೇಶಾಭಿಮಾನಿಯಾದ ರಾಯಕರರು ಅವರ ಆತ್ಮೀಯ ಗುರುಗಳಾದ ವಿ.ಎ. ಹೊದಿಕೆ, ಎಮ್.ಎಸ್. ಪೈ, ವಾಮನ ಹೊದಿಕೆ, ಬಸಪ್ಪ ಭೂಮಾ, ಅಪ್ಪಾ ಭಟ್ಟ, ನಾಯ್ಕ ಮಾಸ್ತರ, ಕೆ.ಎಸ್. ಮರಾಠೆರವರ ಗರಡಿಯಲ್ಲಿ ತಯಾರಾಗಿ, ಸ್ವತಂತ್ರ ಸಂಗ್ರಾಮ 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಇವರಿಗೆಲ್ಲ ಸಹಕರಿಸುತ್ತ, ಇವರೂ ಸಹ ಚಳುವಳಿಯಲ್ಲಿ ಪಾಲ್ಗೊಂಡರು.
- ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ರಾಮಕೃಷ್ಣ ಹೆಗಡೆಯವರು ಶಿರಸಿಯಲ್ಲಿ ಶ್ರೀ ಮಾರಿಕಾಂಬಾ ಹೈಸ್ಕೂಲಿನಲ್ಲಿ 9 ಮತ್ತು 10ನೇ ಕ್ಲಾಸಿನಲ್ಲಿ ಆರ್.ಜಿ. ರಾಯಕರರ ಸಹಪಾಠಿಗಳಾಗಿದ್ದರು.

- ಶ್ರೀ ಮಾರಿಕಾಂಬಾ ದೇವಾಲಯದ 1980–85ರ ಅವಧಿಯ ಅಧ್ಯಕ್ಷರಾಗಿ ಐದು ವರ್ಷಗಳ ಕಾಲ ಹಗಲು ರಾತ್ರಿ ಅದರ ಅಭಿವೃದ್ಧಿಗಾಗಿ ಶ್ರಮಿಸಿ ಕಲ್ಯಾಣ ಮಂಟಪ, ಈಶ್ವರ ದೇವಾಲಯ, ಭಿತ್ತಿಚಿತ್ರ ಸರಿಪಡಿಸುವಿಕೆ, ಹೂದೋಟ, ದೇವಿಯ ನವಗ್ರಹ ತೈಲವರ್ಣ ಚಿತ್ರಗಳು, ದೇವಸ್ಥಾನದ ಆವರಣದಲ್ಲಿ ಶಿಲ್ಪಕಲೆಗಳು, ಹೀಗೆ ದೇವಾಲಯವನ್ನು ರಾಜ್ಯದ ಪ್ರವಾಸೋದ್ಯಮ ಸ್ಥಳ ಮಾಡಿ, ದೇವಿಗೆ ಅಮೂಲ್ಯ ಆಕರ್ಷಣೀಯ ಆಭರಣಗಳನ್ನು ಮಾಡಿಸಿ, ಇಡೀ ವರ್ಷ ಸಾಂಸ್ಕೃತಿಕ, ನಾಟ್ಯ, ನಾಟಕ, ಭಾಷಣಗಳನ್ನು ಏರ್ಪಡಿಸುತ್ತ, ಶ್ರೀ ದೇವಿಯ ಕೀರ್ತಿ ನಾಡಿನಾದ್ಯಂತ ನೂರ್ಮಡಿ ಹೆಚ್ಚಲೂ ಕಾರಣಕರ್ತರಾದರು. ರಾಯಕರರ ಸೇವೆ ಅವಿಸ್ಮರಣೀಯವಾದದ್ದು ಅಭಿನಂದನಾರ್ಹರು.
- ಕನ್ನಡ ನಾಡಿನ ಖ್ಯಾತ ಚಿತ್ರಕಲಾವಿದರಾದ ಡಾ. ಎಂ.ವಿ. ಮಿಣಜಗಿ, ಟಿ.ಪಿ. ಅಕ್ಕಿ, ಡಿ.ವಿ. ಹಾಲಭಾವಿಯವರ ಸಂಗಡ ನಾಲ್ಕು ದಶಕಗಳ ಕಾಲ ರಾಜ್ಯದ ಕಲಾ ಸಾಂಸ್ಕೃತಿಕ ಸಪ್ತಾಹ, ಕಲೆ, ಕಲಾ ಶಿಕ್ಷಣ, ಚಿತ್ರಕಲಾ ಶಿಕ್ಷಕರ, ಕಲಾ ಶಾಲೆಗಳ ಅಭಿವೃದ್ಧಿಗಾಗಿ ಯೋಗ್ಯ ಸ್ಥಾನಮಾನ ಸಿಗುವಂತೆ ಒಂದೇ ಸಮನೆ ತಿರುಗಾಡಿ ದುಡಿದಿದ್ದಾರೆ. ಈ ಮೂವರು ಕಲಾ ದಿಗ್ಗಜರಿಗೆ ರಾಯಕರರು ಅತ್ಯಂತ ಆಪ್ತರಾಗಿದ್ದರು. ಅನೇಕ ಚಿತ್ರಕಲಾ ಶಿಕ್ಷಕರ ಸಮ್ಮೇಳನಗಳನ್ನು ವಿವಿಧ ಸ್ಥಳಗಳಲ್ಲಿ ಜರುಗಿಸಿ, ದೃಶ್ಯಕಲೆ ಕುರಿತು ಜಾಗೃತಿ ಮೂಡಿಸಿದ್ದಾರೆ.
- ಚಿತ್ರಕಲೆ, ಲಲಿತಕಲೆ, ಶಿಲ್ಪಕಲೆ, ಚಿತ್ರಕಲಾ ಶಿಕ್ಷಣ ಕುರಿತು ರಾಜ್ಯದಲ್ಲಿ ನಡೆದ ಸಮ್ಮೇಳನ, ವಿಚಾರ ಸಂಕಿರಣ ಮತ್ತು ಸಭೆಗಳಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. ಈ–ಟಿವಿ, ಚಂದನ ಹಾಗೂ ಉದಯ ಟಿವಿಗಳಲ್ಲಿ ರಾಯಕರರ ಸಂದರ್ಶನಗಳು ಮತ್ತು ಅವರು ಸ್ಥಾಪಿಸಿದ ಕಮಲಾ ರಾಯಕರ ವಸ್ತು ಸಂಗ್ರಹಾಲಯದ ಬಗ್ಗೆ ಸಂದರ್ಶನಗಳು ಪ್ರಸಾರವಾಗಿವೆ. ಕಾರವಾರ ಹಾಗೂ ಧಾರವಾಡ ಆಕಾಶವಾಣಿಯಲ್ಲಿ ದೃಶ್ಯಕಲೆ ಕುರಿತು ಇವರ ವಿದ್ವತ್‌ಪೂರ್ಣ ಭಾಷಣಗಳು ಪ್ರಸಾರವಾಗಿವೆ.
- ನವದೆಹಲಿಯು ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು 1995ರಲ್ಲಿ ಸಿಮ್ಲಾದಲ್ಲಿ ಏರ್ಪಡಿಸಿದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ 'ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲೆಯ ಸ್ಥಾನ' ಎಂಬ ವಿಷಯದ ಕುರಿತು ಇಂಗ್ಲೀಷನಲ್ಲಿ ಪ್ರಬಂಧವನ್ನು ಮಂಡಿಸಿದ್ದಾರೆ.
- 2000ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಏರ್ಪಡಿಸಿದ ಕರ್ನಾಟಕದ ದೃಷ್ಟಿಕೋನ–ಹಿನ್ನೋಟ–2 ಎಂಬ ಚಿತ್ರಕಲಾ ಪ್ರದರ್ಶನದಲ್ಲಿ ಎಸ್.ಎಂ. ಪಂಡಿತ, ವೈ. ನಾಗರಾಜು, ರಾಮನರಸಯ್ಯ ಎಂ., ಚಿನ್ನಣ್ಣವರ್ ಎನ್.ಬಿ., ಶಂಕರರಾವ್ ಎಂ., ಅಮೀನ ಸಾಹೇಬ್ ಕಮಡೋಳಿ, ಶಾಂತಲಿಂಗಪ್ಪ ಪಾಟೀಲ್, ಕೃಷ್ಣಾಕ್ಷತ್ರಿ, ಕುಮಾರ ಚಂದ್ರಶೇಖರ ಮುಂತಾದವರು ರಚಿಸಿದ ಭಾವಚಿತ್ರಗಳೊಂದಿಗೆ ಆರ್.ಜಿ. ರಾಯಕರ ಅವರು ರಚಿಸಿದ ಭಾವಚಿತ್ರ ಕೂಡಾ ಪ್ರದರ್ಶನಗೊಂಡಿದೆ.
- ದಾಂಡೇಲಿ ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಪಕ್ಷದ ರಾಜಕೀಯ ಪರಿಷತ್ತು ದಾಂಡೇಲಿಯಲ್ಲಿ ಬೃಹತ್ ಜನಜಾಗೃತಿ ಸಮಾವೇಶ ಎರಡು ದಿನ 09.08.1972 ರಂದು ಜರುಗಿತು. ಇದರ ಸವಿನೆನಪಿಗಾಗಿ 'ಗಾಂಧಿ ಶತಾಬ್ದಿ' ಸ್ಮರಣ ಸಂಚಿಕೆ ಪ್ರಕಟಿಸಲಾಯಿತು. ರಾಯಕರರು ಸಂಪಾದಕ ಮಂಡಳಿಯ ಸಂಚಾಲಕರಾಗಿ ಹೊರತಂದ ಮಹತ್ ಕಾರ್ಯದ ಸಂಚಿಕೆಯು ಅಧ್ಯಯನದ ವಿದ್ವತ್‌ಪೂರ್ಣ ಗಾಂಧೀಜಿಯ ಚಿತ್ರಗಳು ಬಿಡಿಸಿ, ಬೃಹತ್ ಸಂಚಿಕೆಯು ಐತಿಹಾಸಿಕ ದಾಖಲೆ ನಿರ್ಮಿಸಿದ ಹೆಮ್ಮೆ ರಾಯಕರರದ್ದು.

- ಮಾನ್ಯ ರಾಮಕೃಷ್ಣ ಹೆಗಡೆಯವರು 25 ವರ್ಷ ಸಾಮಾಜಿಕ, ರಾಜಕೀಯ ಕಾರ್ಯನಿರ್ವಹಿಸಿದ ಸವಿನೆನಪಿಗಾಗಿ ಸ್ಮರಣ ಸಂಚಿಕೆ ಮಂಡಳಿಯ ಪ್ರಧಾನ ಕಾರ್ಯದರ್ಶಿಯಾಗಿ ಹೊರತಂದ ಸ್ಮರಣ ಸಂಚಿಕೆ ಅರ್ಥಪೂರ್ಣವಾಗಿ ವೈಶಿಷ್ಟಪೂರ್ಣವಾಗಿ ಆಕರ್ಷಕವಾಗಿದೆ ಎಂದು ಮಾನ್ಯ ರಾಮಕೃಷ್ಣ ಹೆಗಡೆಯವರಿಂದ ಶ್ಲಾಘನೆ (ಶಿರಸಿ, 15.08.1984).
- ಆರ್.ಜಿ. ರಾಯಕರರು 1980 ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತರಾದಾಗ ಶಿರಸಿಯಲ್ಲಿ ಏರ್ಪಡಿಸಿದ ಅಭಿನಂದನ ಸಮಾರಂಭದಲ್ಲಿ 'ಕಲಾಗೌರವ' ಎಂಬ ಸಂಭಾವನಾ ಗ್ರಂಥವನ್ನು ಸಮರ್ಪಣೆ ಮಾಡಲಾಯಿತು. ಇದರಲ್ಲಿ 26 ಪ್ರತಿಭಾವಂತರು, ಸಾಹಿತಿಗಳು, ಗಣ್ಯರ ಲೇಖನ ಇರುವ ಈ ಗ್ರಂಥ ಮಾದರಿಯಾಗಿದೆ.
- ರಾಯಕರರು 1946ರಲ್ಲಿ ಮುಂಬಯಿಯ ಸರ್ ಜೆ.ಜೆ. ಕಲಾ ಶಾಲೆಯಲ್ಲಿ ಚಿತ್ರಕಲಾ ಅಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ ವಾರ್ಷಿಕ ಮಹಾಸಭೆಯಲ್ಲಿ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾಗಿ ಬಹುಮುಖ ಕಾರ್ಯನಿರ್ವಹಿಸಿದ ಬಗ್ಗೆ ವಾರ್ಷಿಕ ಮಹಾ ಸಭೆಯಲ್ಲಿ ಮಾನ್ಯ ಪಿ.ಎ. ಢೊಂಡ್ ಅವರಿಂದ ಸನ್ಮಾನಿಸಿ ಗೌರವಿಸಲಾಯಿತು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಖ್ಯಾತ ಚಿತ್ರಕಲಾವಿದ ಡಾ. ಕೆ.ಕೆ. ಹೆಬ್ಬಾರರು ವಹಿಸಿದ್ದರು.
- 2007 ರಲ್ಲಿ ಅಂಕೋಲಾದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಸತ್ಯಾಗ್ರಹ ಚಳುವಳಿಯ ಶತಮಾನೋತ್ಸವ ಸಮಾರಂಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪುಸ್ತಕಗಳು, ಚಿತ್ರ–ಶಿಲ್ಪಗಳು, ಛಾಯಾಚಿತ್ರ ಮತ್ತು ಪತ್ರಿಕೆಗಳ ಬೃಹತ್ ವಸ್ತು ಪ್ರದರ್ಶನ ರಾಷ್ಟ್ರಮಟ್ಟದಲ್ಲಿ ಮಿಂಚಿತು. ಇದರ ಸಂಯೋಜಕರಾಗಿ ಕಾರ್ಯನಿರ್ವಹಿಸಿದ ಆರ್.ಜಿ. ರಾಯಕರ ಅವರಿಗೆ ಮಾನ್ಯ ದಿಗ್ವಿಜಯ ಸಿಂಗ್ ಅವರಿಂದ ಸನ್ಮಾನಿಸಿ ಗೌರವಿಸಲಾಯಿತು.
- ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲಿ 'ರಾಯಕರ ಮಾಸ್ತರ' ರೆಂದೇ ಪರಿಚಿತರಾದ ಇವರು ಅಪಾರವಾದ ಕನ್ನಡಾಭಿಮಾನ ಹೊಂದಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರಾಗಿದ್ದ ಇವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜರುಗಿದ 42 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ.
- ಹನ್ನೆರಡು ವರ್ಷ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಚಿತ್ರಕಲಾವಿದರ ಸಮಸ್ಯೆ, ಕಲಾ ಚಟುವಟಿಕೆ, ಕಲಾಶಾಲೆಗಳ ಅಭ್ಯುದಯ, ಕಲಾ ಪ್ರಕಟಣೆಗಳು, ಕಲೆಯ ಬಗ್ಗೆ ಚಿಂತನೆ ಕುರಿತಾದ ವಿಷಯಗಳನ್ನು ವಾದಿಸಿ, ಕಲೆಯ ಬಗ್ಗೆ ಯೋಗ್ಯ ಸ್ಥಾನಮಾನ ಸಿಗುವಂತೆ ಒಂದೇ ಸಮನೆ ದುಡಿದಿದ್ದಾರೆ. ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಸ್ಥಾನ ನೀಡಲೇಬೇಕಾಗಿತ್ತು. ಯೋಗ ಇರಲಿಲ್ಲ. ಕಲಾಕ್ಷೇತ್ರಕ್ಕೆ ಅವರ ಕೊಡುಗೆ ಗಮನಾರ್ಹವಾದದ್ದು.

ರಾಯಕರರ ಕುರಿತು ಗಣ್ಯ ವ್ಯಕ್ತಿಗಳ ಅನಿಸಿಕೆ–ಅಭಿಪ್ರಾಯಗಳು

ಆರ್.ಜಿ. ರಾಯಕರರವರ ವ್ಯಕ್ತಿತ್ವ, ಕಲಾಸೃಷ್ಟಿ ಮತ್ತು ಕಲಾ ಸಾಧನೆ ಕುರಿತಂತೆ ಗಣ್ಯರು, ಅವರ ಮಿತ್ರರು, ಅಭಿಮಾನಿಗಳು ತಮ್ಮ ಅನಿಸಿಕೆ– ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಮುಖ್ಯವಾದ ಅನಿಸಿಕೆ–ಅಭಿಪ್ರಾಯಗಳನ್ನು ಇಲ್ಲಿ ದಾಖಲಿಸಲಾಗಿದೆ.

- ಆರ್.ಜಿ. ರಾಯಕರ ಅವರು ರಾಜ್ಯದ ಉತ್ತಮ ಚಿತ್ರಕಲಾ ಶಿಕ್ಷಕರಾಗಿ ಗುರುತಿಸಿಕೊಂಡಿದ್ದಾರೆ. ಶಿಕ್ಷಕರಾಗಿ ನೂರಾರು ಕಲಾ ವಿದ್ಯಾರ್ಥಿಗಳನ್ನು ತಯಾರು ಮಾಡಿರುವುದಲ್ಲದೇ, ವಿವಿಧ ರಂಗಗಳಲ್ಲಿ ಅವರ ವಿದ್ಯಾರ್ಥಿವೃಂದ ಸತ್ಪ್ರಜೆಯಾಗಿ ಬೆಳಗುವಂತೆ ಮಾಡಿದ್ದಾರೆ. ಚಿತ್ರಕಲಾ ಶಿಕ್ಷಕರಿಗೆ ಉತ್ತಮ ಶ್ರೇಣಿ ದೊರಕಬೇಕು. ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣಕ್ಕೆ ಹೆಚ್ಚಿನ ಸ್ಥಾನ ಸಿಗಬೇಕು. ಇದು ಒಂದು ಪರೀಕ್ಷೆ ವಿಷಯವೆಂದು ಪರಿಗಣಿಸಬೇಕು ಎಂಬುದು ಅವರ ಬಯಕೆಯಾಗಿದೆ. ಅವರು ಕೇವಲ ಚಿತ್ರಕಲಾ ಶಿಕ್ಷಕರಲ್ಲ ಬಹುಮುಖ ಪ್ರತಿಭೆಯುಳ್ಳ ಉತ್ತಮ ಚಿತ್ರಕಲಾವಿದ, ಲೇಖಕ, ವಿಚಾರ ಪ್ರದವಾದ ಮಾತುಗಳನ್ನಾಡುವ ಉತ್ತಮ ಮಾತುಗಾರರು ಹೌದು. ಚಿತ್ರಕಲಾ ಪ್ರಪಂಚದ ಬಗ್ಗೆ ನಿರಂತರ ಕಳಕಳಿಯನ್ನು ಹೊಂದಿದ ರಾಯಕರರು ಚಿತ್ರಕಲಾ ಪ್ರಪಂಚಕ್ಕೆ ಒಂದು ಆಸ್ತಿಯೇ ಆಗಿದ್ದಾರೆ.

– ಟಿ.ಪಿ. ಅಕ್ಕಿ

ಖ್ಯಾತ ಚಿತ್ರಕಲಾವಿದರು, ಗದಗ

- R.G. Raikar a smiling figure with pleasing and impressing personality always creating friendly atmosphere as a student of art of mine, he was very faithful and hard working. He has great capacity of organization which he proved during art teachers' conference.

– M.V. Minajigi

Eminent Artist, Hubballi

- R.G. Raikar has honestly served the sacred cause of art for all these years and has spread art and art activities in that part of the country which was neglected for many years. He was my sincere and obedient student in the drawing and painting classes long back. He is a kind; his loving nature makes one to honour him without any obligation.

– D.V. Halabhavi

Eminent Artist, Dharwad

- 'ಕನ್ನಡ ನಾಡು, ನುಡಿ, ಕಲೆಗಳ ಸೇವೆಯನ್ನು ರಾಯಕರ ಮಾಸ್ತರರು ಯಾವುದೆ ಸದ್ದು-ಗದ್ದಲವಿಲ್ಲದೆ, ಎಲೆಮರೆಯ ಕಾಯಿಯಂತೆ ನಡೆಸಿಕೊಂಡು ಬಂದಿದ್ದಾರೆ. ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ವಿಷಯದಲ್ಲಿ ಅವರಿಗೆ ವಿಶೇಷವಾದ ಅಭಿಮಾನ ಹಾಗೂ ಅಭಿರುಚಿ ಇದೆ. ಒಬ್ಬ ಆದರ್ಶ ಚಿತ್ರಕಲಾ ಶಿಕ್ಷಕರಾಗಿ, ಲೇಖಕರಾಗಿ ಮತ್ತು ಒಬ್ಬ ಸಜ್ಜನರಾಗಿ ಒಂದು ಸುಸಂಸ್ಕೃತ ಬದುಕನ್ನು ನಡೆಸಿಕೊಂಡು ಬಂದ ಶ್ರೇಷ್ಠ ಚಿತ್ರಕಲಾವಿದರಿವರು'

– ಹಂಪ ನಾಗರಾಜಯ್ಯ

ಖ್ಯಾತ ಸಾಹಿತಿಗಳು

- ಕಲೆಗಳೆಲ್ಲವೂ ನಮ್ಮ ಆತ್ಮವನ್ನು ಸಂಸ್ಕಾರಗೊಳಿಸುತ್ತವೆ. ಚಿತ್ರಕಲಾವಿದ ರಾಯಕರ ಮಾಸ್ತರರ ಕಲೆಯು ಇದರಿಂದ ಹೊರತಾಗಿಲ್ಲ. ಆದ್ದರಿಂದ ರಾಯಕರ ಅವರು ನಾಡ ಸಂಸ್ಕೃತಿಯನ್ನು ರೂಪಗೊಳಿಸುವ ರೂವಾರಿ ಎನ್ನಬೇಕು, ಕಲೆಗಳು ಮಾನವ ಚೈತನ್ಯದ ಮತ್ತು ಮಾನವೀಯ ಮೌಲ್ಯಗಳನ್ನು ಅರಿಯಲು ನೆರವಾಗುತ್ತವೆ. ಅವು ಬದುಕಿಗೆ ಬದಕಲು ಬೇಕಾದ ನಮ್ಮ ತಾಕತ್ತನ್ನು ಹೆಚ್ಚಿಸುತ್ತವೆ. ಇಂತಹ ಕಲೆಯನ್ನು ಕರಗತ ಮಾಡಿಕೊಂಡ ಪ್ರತಿಭಾವಂತ ಚಿತ್ರಕಲಾ ಶಿಕ್ಷಕ ಮತ್ತು ಕಲಾವಿದ ತನ್ನ ನಿಷ್ಠೆ ಹಾಗೂ ಸತತೋದ್ಯೋಗದಿಂದ ಸೇವಾಕಾರ್ಯವನ್ನು ತನ್ನ ಶಾಲೆ ಇಲ್ಲವೇ ಶಿರಸಿಗಷ್ಟೇ ಮೀಸಲಾಗಿರಿಸದೇ ಜಿಲ್ಲೆಯ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ತೊಡಗಿಸಿಕೊಳ್ಳಬಹುದು ಎಂಬುದಕ್ಕೆ ರಾಯಕರರು ನಮ್ಮ ರಾಜ್ಯದಲ್ಲೇ ಉತ್ತಮ ಉದಾಹರಣೆಯಾಗಿದ್ದಾರೆ.

– ಡಿ.ಎನ್. ರಾಯಕರ

ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ ಅವರೊಂದಿಗೆ ಆರ್.ಜಿ. ರಾಯಕರರು

ವೈಯಕ್ತಿಕ ಪರಿಚಯ

ಹೆಸರು: ರಾಮಚಂದ್ರ ಗುರುರಾಯ ರಾಯಕರ

ತಂದೆ ಮತ್ತು ತಾಯಿ: ತಂದೆ ಗುರುರಾಯ ರಾಮಚಂದ್ರ ರಾಯಕರ, ತಾಯಿ ನಾಗಮ್ಮ

ಜನನ: ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ 1924ನೇ ಅಗಷ್ಟ್ 30

ಪ್ರಾಥಮಿಕ ಶಿಕ್ಷಣ: ಶಿರಸಿ ಪ್ರಾಥಮಿಕ ಶಾಲೆ

ಪ್ರೌಢ ಶಿಕ್ಷಣ: ಶ್ರೀ ಮಾರಿಕಾಂಬಾ ಪ್ರೌಢ ಶಾಲೆ, ಶಿರಸಿ

ಚಿತ್ರಕಲಾ ಶಿಕ್ಷಣ: ಮುಂಬೈಯಲ್ಲಿ ಸರ್ ಜೆ.ಜೆ. ಕಲಾಶಾಲೆಯಲ್ಲಿ ಡಿಟಿಸಿ, ಆರ್ಟ್ ಮಾಸ್ಟರ್ ಕೋರ್ಸ, ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೊಮಾ

ಸೇವೆ: 1947 ರಿಂದ 1980 ರವರೆಗೆ ಶಿರಸಿಯ ಶ್ರೀ ಮಾರಿಕಾಂಬಾ ಪ್ರೌಢ ಶಾಲೆಯಲ್ಲಿ 33 ವರ್ಷಗಳ ದೀರ್ಘಕಾಲ ಚಿತ್ರಕಲಾ ಶಿಕ್ಷಕನಾಗಿ ಸೇವೆ

ಸಲ್ಲಿಸಿದ ವಿವಿಧ ಸೇವೆಗಳು

- ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ 12 ವರ್ಷ ಸೇವೆ
- ಕರ್ನಾಟಕ ರಾಜ್ಯ ಕಲೆ ಹಾಗೂ ಕೈಗಾರಿಕಾ ಮಂಡಳಿ ಸದಸ್ಯ
- ಚಿತ್ರಕಲಾ ಪರೀಕ್ಷಾ ಮಂಡಳಿ ಸದಸ್ಯ
- ಚಿತ್ರಕಲಾ ಪಠ್ಯ ಪುಸ್ತಕ ರಚನಾ ಮಂಡಳಿಯ ಸದಸ್ಯ
- ಚಿತ್ರಕಲಾ ಅಭ್ಯಾಸ ಪತ್ರಿಕೆಯ ಸದಸ್ಯ
- ಕರ್ನಾಟಕ ರಾಜ್ಯ ಕಲಾಕೃತಿಗಳ ಮಾರಾಟ ಸಮಿತಿಯ ಸದಸ್ಯ
- ಡ್ರಾಯಿಂಗ್ ಗ್ರೇಡ್, ಉಚ್ಚಕಲಾ, ಎಸ್.ಎಸ್.ಎಲ್.ಸಿ. ಗೆ ಡ್ರಾಯಿಂಗ್ ವಿಷಯಗಳ ಪೇಪರ್ ಸೆಟರ್, ಪರೀಕ್ಷೆಗಳ ಚೇರಮನ್ನರಾಗಿ ಕಾರ್ಯನಿರ್ವಹಣೆ
- ಕೇರಳದ ಪ್ರಾಥಮಿಕ ಶಾಲಾ ಚಿತ್ರಕಲೆಯ ಅಭ್ಯಾಸ ಕ್ರಮ ಸುಧಾರಣಾ ಸಮಿತಿ ಸದಸ್ಯ
- ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಸುಧಾರಣಾ ಸಮಿತಿ ಸದಸ್ಯ
- ದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಚಿಲ್ಡ್ರನ್ ಏಜ್ಯುಕೇಶನ ಸಮಿತಿ ಸದಸ್ಯ
- ದೆಹಲಿಯ ಅಂತರರಾಷ್ಟ್ರೀಯ ಚಿಕ್ಕಮಕ್ಕಳ ಕಲಾ ಪ್ರದರ್ಶನಕ್ಕೆ ರಾಜ್ಯ ಪ್ರತಿನಿಧಿ
- ಕರ್ನಾಟಕ ರಾಜ್ಯದಲ್ಲಿ ಚಿತ್ರಕಲಾ ಶಾಲೆ ಸ್ಥಾಪಿಸಲು, ಮಾನ್ಯ ಅಣ್ಣಾರಾವ್ ಗಣಮುಖಿ ಅವರ ಅಧ್ಯಕ್ಷತೆಯಲ್ಲಿ ಶಾಂತಿನಿಕೇತನ, ಮುಂಬಯಿ, ಬರೋಡಾ, ಹೈದರಾಬಾದಗಳಲ್ಲಿನ ಚಿತ್ರಕಲಾ ಶಾಲೆಗಳ ಪ್ರಗತಿ ವೀಕ್ಷಿಸಲು ಮೂರು ಜನರ ಸಮಿತಿಯಲ್ಲಿ ರಾಯಕರರು ಒಬ್ಬರಾಗಿದ್ದರು
- ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯ ಚಿತ್ರಕಲಾ ತರಬೇತಿ ಹಾಗೂ ಚಿತ್ರಕಲಾ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸೇವೆ

- ಶಿರಸಿಯ ಸುವರ್ಣ ಕಲಾಕಾರರ ಸಂಘ (ರಿ)ದ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ (1960)
- ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘ (ರಿ)ದ ಸಂಸ್ಥಾಪಕರು ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ (1962)
- ಗದಗದ ವಿಜಯ ಕಲಾಮಂದಿರ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ (2005)
- 1980–1985 ಶಿರಸಿಯ ಪ್ರಸಿದ್ಧ ಶ್ರೀ ಮಾರಿಕಾಂಬಾ ದೇವಾಲಯದ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿ ಸೇವೆ
- 1982 ಶಿರಸಿಯಲ್ಲಿ ನಡೆದ ಅಖಿಲ ಭಾರತ 55ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಉಪಾಧ್ಯಕ್ಷ ಹಾಗೂ ಚಿತ್ರಕಲಾ ಪ್ರದರ್ಶನದ ಅಧ್ಯಕ್ಷರಾಗಿ ಸೇವೆ
- 1999 ಉತ್ತರ ಕನ್ನಡ ಜಿಲ್ಲಾ ಚಿತ್ರಕಲಾ ಪರಿಷತ್ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ
- ಮೈಸೂರು ದಸರಾ ಸಮಿತಿಯ ಸದಸ್ಯ ಹಾಗೂ ಪ್ರದರ್ಶನ ಬಹುಮಾನ ನಿರ್ಣಾಯಕ ಸದಸ್ಯನ್ನಾಗಿ ಸೇವೆ

ಪ್ರಶಸ್ತಿಗಳು

1946 : ಮುಂಬಯಿಯ ಖ್ಯಾತ ರೂಬಿ ಜ್ಯುವೆಲರ್ಸ್ ಸಂಸ್ಥೆಯ ಆಭರಣ ವಿನ್ಯಾಸ ಸ್ಪರ್ಧೆಯಲ್ಲಿ ಪ್ರಶಸ್ತಿ

1981 : ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ

1989 : ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

1993 : ದೆಹಲಿಯ ಅಖಿಲ ಭಾರತ ಕಲೆ ಮತ್ತು ಕೈಗಾರಿಕಾ ಸೊಸೈಟಿಯ ಸುವರ್ಣಮಹೋತ್ಸವ ಸಮಾರಂಭದಲ್ಲಿ ರಾಷ್ಟ್ರೀಯ ಕಲಾ ಪ್ರಶಸ್ತಿ ನೀಡಿ ಗೌರವಿಸಲಾಗಿದೆ

ಪುರಸ್ಕಾರಗಳು

1947 : ಶಿರಸಿಯಲ್ಲಿ ಜರುಗಿದ ಅಖಿಲ ಭಾರತ ಸುಪಾರಿ ಫೆಡರೇಶನ್ ಸಮ್ಮೇಳನದಲ್ಲಿ ಭವ್ಯ ಕಲಾತ್ಮಕ ಮಹಾದ್ವಾರ ರಚಿಸಿದ್ದಕ್ಕಾಗಿ ಗೌರವ ಸನ್ಮಾನ

1949 : ನಾಸಿಕನಲ್ಲಿ ನಡೆದ ಮುಂಬಯಿ ರಾಜ್ಯ ಚಿತ್ರಕಲಾ ಶಿಕ್ಷಕರ ಸಮ್ಮೇಳನದಲ್ಲಿ 'ಆದರ್ಶ ಚಿತ್ರಕಲಾ ಶಿಕ್ಷಕ' ರೆಂದು ಗೌರವ ಸನ್ಮಾನ

1950 : ಕುಮಟಾದಲ್ಲಿ ಜರುಗಿದ ಅಖಿಲ ಕರ್ನಾಟಕ ಕೊಂಕಣಿ ಸಾಹಿತ್ಯ ಸಮ್ಮೇಳನದಲ್ಲಿ 'ಕೊಂಕಣಿ ಭಾಷಾ ಕಾರ್ಯಕರ್ತ ಮತ್ತು ಶ್ರೇಷ್ಠ ಕಲಾವಿದ'ರೆಂದು ಗೌರವ ಸನ್ಮಾನ

1952 : ಬಿಜಾಪುರದಲ್ಲಿ ನಡೆದ ಮುಂಬಯಿ ರಾಜ್ಯ ಚಿತ್ರಕಲಾ ಮಹಾ ಸಮ್ಮೇಳನದಲ್ಲಿ 'ಆದರ್ಶ ಚಿತ್ರಕಲಾ ಶಿಕ್ಷಕ'ಎಂದು ಗೌರವ ಸನ್ಮಾನ

1957 : ಶಿರಸಿಯಲ್ಲಿ ಜರುಗಿದ ಅಖಿಲ ಭಾರತ ಮಲೆನಾಡ ಸಮ್ಮೇಳನದ ಭವ್ಯ ಆಕರ್ಷಕ ಮಹಾದ್ವಾರ ರಚಿಸದಕ್ಕಾಗಿ ಮಾನ್ಯ ನಿಜಲಿಂಗಪ್ಪನವರಿಂದ ಗೌರವ ಸನ್ಮಾನ

1958 : ಗದಗದಲ್ಲಿ ಗದಗ ಆರ್ಟ್ ಸರ್ಕಲ್ ಸಂಸ್ಥೆಯಿಂದ 'ಆದರ್ಶ ಚಿತ್ರಕಲಾ ಶಿಕ್ಷಕ'ರೆಂದು ಟಿ.ಪಿ. ಅಕ್ಕಿಯವರಿಂದ ಗೌರವ ಸನ್ಮಾನ

1961 : ಶಿರಸಿಯಲ್ಲಿ ನಡೆದ 5ನೇ ವಾರ್ಷಿಕ ಜಿಲ್ಲಾ ಸಂಗೀತ ಮಹೋತ್ಸವ ಸಮಾರಂಭದಲ್ಲಿ 'ಕಲಾ ಪರಿಣಿತ'ರೆಂದು ಗೌರವಿಸಿ ಸನ್ಮಾನಿಸಲಾಯಿತು

1962 : ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ ಮಹಾ ಸಮ್ಮೇಳನದಲ್ಲಿ 'ಕಲಾ ಸಾಧಕ'ರೆಂದು ಗೌರವಿಸಿ ಸನ್ಮಾನಿಸಲಾಯಿತು

1963 : ಬೆಂಗಳೂರಿನಲ್ಲಿ ಡ್ರಾಯಿಂಗ್ ಟೀಚರ್ಸ್ ಟ್ರೈನಿಂಗ್ ಇನ್ಸಿಟ್ಯೂಟಿನ ವಾರ್ಷಿಕ ಸಮ್ಮೇಳನ ದಲ್ಲಿ 'ಕಲಾರಾಧಕ' ಎಂದು ಗೌರವಿಸಿ ಸನ್ಮಾನಿಸಲಾಯಿತು

1963 : ಹುಬ್ಬಳ್ಳಿಯ ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದ ವಾರ್ಷಿಕ ಮಹಾ ಸಮಾರಂಭದಲ್ಲಿ ಮಾನ್ಯ ಎಸ್.ಆರ್. ಕಂಠಿಯವರಿಂದ 'ಆದರ್ಶ ಶಿಕ್ಷಕ' ರೆಂದು ಗೌರವಿಸಿ ಸನ್ಮಾನಿಸಲಾಯಿತು

1965 : ಕಾರವಾರದಲ್ಲಿ ನಡೆದ 45ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಮಾರಂಭದಲ್ಲಿ 'ಕನ್ನಡದ ಉತ್ತಮ ಸೇವೆ' ಎಂದು ಗೌರವಿಸ ಸನ್ಮಾನಿಸಲಾಯಿತು

1969 : ಗದಗನಲ್ಲಿ ನಡೆದ ಟಿ.ಪಿ. ಅಕ್ಕಿ ಷಷ್ಠಾಬ್ದಿ ಸಮಾರಂಭದಲ್ಲಿ 'ಕಲಾಸಾಧಕ'ರೆಂದು ಗೌರವಿಸಿ ಸನ್ಮಾನಿಸಲಾಯಿತು

1969 : ಶಿರಸಿಯ ಪ್ರಸಿದ್ಧ ಶ್ರೀ ಮಾರಿಕಾಂಬಾ ದೇವಾಲಯದ ವಿಶ್ವಸ್ಥ ಮಂಡಳಿಯವರಿಂದ ರಾಯಕರ ಅವರಿಗೆ ಪೂಜನೀಯ ಸೇವೆಗೈದ ಬಗ್ಗೆ ಸುವರ್ಣ ಪದಕದೊಂದಿಗೆ ಗೌರವಿಸಿ ಸನ್ಮಾನಿಸಲಾಯಿತು

1979 : ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸಮಾರಂಭದಲ್ಲಿ ಗೌರವ ಸನ್ಮಾನ

1987 : ಗದಗಿನ ವಿಜಯ ಕಲಾಮಂದಿರ ಸಂಸ್ಥೆಯ ಸಮಾರಂಭದಲ್ಲಿ ಗೌರವ ಸನ್ಮಾನ

1987 : ಕಾರವಾರದಲ್ಲಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆಯ ಸಮಾರಂಭದಲ್ಲಿ 'ಆದರ್ಶ ಚಿತ್ರಕಲಾ ಶಿಕ್ಷಕ'ರೆಂದು ಗೌರವಿಸಿ ಸನ್ಮಾನಿಸಲಾಯಿತು

1992 : ಗುಲಬರ್ಗಾದ ದಿ ಇಂಡಿಯಲ್ ಫೈನ್ ಆರ್ಟ್ ಸೊಸೈಟಿಯ ರಜತ ಮಹೋತ್ಸವ ಸಮಾರಂಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು

2003 : ಬೆಂಗಳೂರಿನಲ್ಲಿ ರಾಜ್ಯ ಅನನ್ಯ ಹಾಗೂ ಶಿಕ್ಷಣ ಮತ್ತು ಕಲಾ ವೇದಿಕೆಯ ಆಶ್ರಯದಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭೆಯ ಸಮಾರಂಭದಲ್ಲಿ ಗೌರವ ಸನ್ಮಾನ

2008 : ಗದಗಿನ ವಿಜಯ ಕಲಾಮಂದಿರದ ವಜ್ರ ಮಹೋತ್ಸವ ಸಮಾರಂಭದಲ್ಲಿ ಮಾನ್ಯ ಡಿ.ಆರ್. ಪಾಟೀಲ್ ಅವರಿಂದ ಗೌರವ ಸನ್ಮಾನ

2009 : ರಾಯಚೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ 7ನೇ ಶೈಕ್ಷಣಿಕ ಮಹಾ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾದ ರಾಯಕರರ ಅವರಿಗೆ ಮಾನ್ಯ ಪಾಪರೆಡ್ಡಿಯವರಿಂದ ಸನ್ಮಾನಿಸಿ ಗೌರವಿಸಲಾಯಿತು

ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು

1985 : ಮೈಸೂರಿನಲ್ಲಿ ಜರುಗಿದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಯಕರರವರು ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದರು. ಮಾನ್ಯ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಉದ್ಘಾಟನೆ ಮಾಡಿದ್ದರು.

1975 : ಮೈಸೂರಿನಲ್ಲಿ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಜಿ.ಎಸ್. ಭಟ್ಟ ಅವರ ನೆರವಿನಿಂದ ರಾಯಕರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು.

1975 : ಮೈಸೂರಿನಲ್ಲಿ ಮೈಸೂರು ಚಿತ್ರಕಲಾ ಮಹಾ ಮಂಡಳದ ವತಿಯಿಂದ ರಾಯಕರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು. ಚಿತ್ರಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅವರು ಕಲಾ ಪ್ರದರ್ಶನದ ಮುಂದಾಳತ್ವ ವಹಿಸಿದ್ದರು.

1959 : ಕುಮಟಾ ಗಿಬ್ಸ್ ಹೈಸ್ಕೂಲಿನ ಗೋಲ್ಡನ್ ಜುಬಿಲಿಯಲ್ಲಿ ಆರ್.ಜಿ. ರಾಯಕರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದ ಆಗಿನ ರಾಷ್ಟ್ರಾಧ್ಯಕ್ಷರಾದ ಮಾನ್ಯ ಡಾ. ರಾಜೇಂದ್ರ ಪ್ರಸಾದ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಗ್ರಂಥ ಋಣ

- ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1989) ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ನಾಡೋಜ ಡಾ. ಜೆ.ಎಸ್. ಖಂಡೇರಾವ್ (2013), ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನನ್ನ ಪ್ರೀತಿಯ ಕಮಲಾ (2002) ಲೇಖಕರು ಮತ್ತು ಪ್ರಕಾಶಕರು: ಆರ್.ಜಿ. ರಾಯಕರ, ಕಮಲ ನಿವಾಸ, ಚೆನ್ನಪಟ್ಟಣ ಬಝಾರ್, ಶಿರಸಿ–581301, ಉ.ಕ.
- ಕರ್ನಾಟಕದ ದೃಷ್ಟಿಕೋನ–ಹಿನ್ನೋಟ (ಕರ್ನಾಟಕದ ಕಲಾವಿದರ ಕಲಾಕೃತಿಗಳ ಪ್ರದರ್ಶನ–2000), ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
